UNIVERSAL LIBRARY
OU_198404
UNIVERSAL LIBRARY

# ಹಳ್ಳಿಗರ ಹಾಡುಗಳು

## (ಬೀಸುವಕಲ್ಲಿನ ಪದಗಳು)

ಬೆಟಗೇರಿ ಕೃಷ್ಣ

# ಹಳ್ಳಿಗರ ಹಾಡುಗಳು

## ಬೀಸುವಕಲ್ಲಿನ ಪದಗಳು

೧. **ಮೊದಲು ಮಾತು.**—ನಮ್ಮ ನಾಡಿನಲ್ಲಿ ಸುಶಿಕ್ಷಿತರಾದ ಪಂಡಿತರನೇಕರು ಕಾವ್ಯಗಳನ್ನು ರಚಿಸಿದಂತೆಯೇ ಅಶಿಕ್ಷಿತರಾದ ಹಳ್ಳಿಗರು, ಅವರಲ್ಲಿಯೂ ಹೆಂಗಸರು, ಹಲವು ಬಗೆಯ ಕವನಗಳನ್ನು ರಚಿಸಿರುವರು. ಇವರಿಬ್ಬರಲ್ಲಿಯ ಸುಶಿಕ್ಷಿತತೆ ಅಶಿಕ್ಷಿತತೆಗಳನ್ನು ಅವರವರ ಕೃತಿಯಲ್ಲಿಯ ಭಾಷಾ ಪದ್ಧತಿ, ಕಾವ್ಯ ಸಂಪ್ರದಾಯ, ಅಲಂಕಾರ, ಲಕ್ಷಣ ಮೊದಲಾದ ಹೊರಗಿನ ಕಾರಣಗಳಿಂದಲೇ ಗುರುತಿಸಬಹುದಲ್ಲದೆ ತಿರುಳಿನ ತಿರುಳಾದ ರಸ ಭಾವ ಕಲ್ಪನೆಗಳಿಂದ ಕಂಡುಹಿಡಿಯುವುದಕ್ಕಾಗುವುದಿಲ್ಲ. ತಮ್ಮಲ್ಲಿರುವ ಗುಣ ವಿಶೇಷದಿಂದ ಈ ಹಳ್ಳಿಗರ ಹಲವು ಕವಿತೆಗಳು ಎಂತೆಂತಹ ಬಲ್ಲಿದರನ್ನೂ ಬೆರಗುಗೊಳಿಸಿಬಿಡುತ್ತವೆ. ಇದಕ್ಕೆ ಕಾರಣವು ಅಕ್ಷರ ಶಿಕ್ಷಣದ ಸಂಸ್ಕಾರವಲ್ಲ; ಮನಸ್ಸು ಬುದ್ಧಿ ಹೃದಯಗಳಿಗಾಗಿದ್ದ ಸ್ವಾಭಾವಿಕ ಸಂಸ್ಕಾರವು. ಈ ಬಗೆಯ ಸಂಸ್ಕಾರವು ನಮ್ಮ ನಾಡಿಗರಲ್ಲಿ, ಕಲಿತವರಿಗೂ ಕಲಿಯದವರಿಗೂ ಸಾಮಾನ್ಯವಾಗಿದೆಯೆಂಬುದನ್ನು ಈಗ ಪ್ರಚಾರದಲ್ಲಿರುವ ಹಳ್ಳಿಗರ ಹಾಡು ಕವಿತೆ ಕತೆಗಳನ್ನು ವಿಮರ್ಶಿಸಿ ಕಂಡುಹಿಡಿಯಬಹುದಾಗಿದೆ. ಇದನ್ನೆಲ್ಲ ಕಣ್ಣಿಟ್ಟು ನೋಡಿ ಕಂಡುಕೊಂಡವನಾದುದರಿಂದಲೇ ರಾಜಕವಿ ನೃಪತುಂಗನು ಕನ್ನಡ ನಾಡನ್ನು ಬಣ್ಣಿಸುವಾಗ—

ಕಂ|| ಪದನರಿದು ನುಡಿಯಲುಂ ನುಡಿ ।
ದುದನರಿದಾರಯಲುಮಾರ್ಪರಾ ನಾಡವರ್ಗಳ್ ||
ಚದುರರ್ ನಿಜದಿಂ ಕುರಿತೋ ।
ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್ ||

ಎಂತಲೂ,

ಕಂ|| ಕುರಿತವರಲ್ಲದೆ ಮತ್ತಂ ।
ಪೆರರುಂ ತಂತಮ್ಮ ನುಡಿಯೊಳೆಲ್ಲಂ ಜಾಣರ್ ||
ಕಿರು ಮಕ್ಕಳ್ ಮೂಮೂಗರು ।
ಮರಿಪಲ್ ಸೆರೆವರ್ ವಿವೇಕಮಂ ಮಾತುಗಳಂ ||

ಎಂತಲೂ ಹೇಳಿರುವನು. ಈ ಮಾತುಗಳು ಬರಿಯ ಅಭಿಮಾನದ ಮಾತುಗಳಲ್ಲವೆಂಬುದು ಅನುಭವಕ್ಕೆ ಬರಬಹುದಾದ ಸಂಗತಿಯಾಗಿದೆ.

ಪ್ರಪಂಚದಲ್ಲಿರುವ ಸತ್ಯ ಸೌಂದರ್ಯಗಳನ್ನು ಕಾಣುವ ಒಳಗಣ್ಣು, ಕಲಿತವರಿಗೂ ಇರುವುದು, ಕಲಿಯದವರಿಗೂ ಇರುವುದು. ಹೊರಗಣ್ಣಿನಂತೆಯೇ ಒಳ

ಗಣ್ಣಿನ ರೀತಿ. ಓದು ಬರೆಹ ಕಲಿತು ಕೆಲವು ಪುಸ್ತಕಗಳನ್ನು ನೋಡಿದ ಮಾತ್ರದಿಂದ ನಮ್ಮ ಕಣ್ಣೋಟವು ಇನ್ನಿಷ್ಟು ಹೆಚ್ಚಾಗುವುದಿಲ್ಲ. ಕಲಿಯದೆ ಇದ್ದರೆ ಇದ್ದ ಕಣ್ಣುಗಳು ಕುರುಡಾಗಿಹೋಗುವುದಿಲ್ಲ. ಇದರಂತೆಯೇ ಒಳಗಣ್ಣು; ಮರವೆಯ ತೆರೆಯಿಂದ ಎಲ್ಲರ ಒಳಗಣ್ಣು ಮುಚ್ಚಿಹೋಗಿರುವುದು. ಆ ಮುಚ್ಚಿದ ಕಣ್ಣು ತೆರೆಯಲು ಕೊಂಚ ಕಾಲವು ಬೇಕು, ಕಾರಣಗಳೂ ಕೆಲವು ಒದಗಬೇಕು. ಓದು ಬರೆಹ ಕಲಿತಷ್ಟಕ್ಕೇ ಒಳಗಣ್ಣು ತೆರೆಯದು. ಬಾಳುವೆಯಲ್ಲಿಯ ಏಳು ಬೀಳುಗಳ, ಸುಖ ದುಃಖಗಳ ಅನುಭವದ ಏಟುಗಳು ಬಿದ್ದಂತೆಲ್ಲ ಅದು ತೆರೆಯುತ್ತ ಬರುವುದು. ಹೆಚ್ಚು ಹೆಚ್ಚು ಅನುಭವಸ್ಥನಾದಂತೆ ಮನುಷ್ಯನು ಹೆಚ್ಚು ಹೆಚ್ಚಾಗಿ ಒಳನೋಟವನ್ನು ಪಡೆಯುತ್ತಾನೆ. ಆ ಒಳನೋಟವು ತಾನೆ ತಾನಾಗಿ ಮನುಷ್ಯನಿಂದ ಮಾತನಾಡಿಸುವ ಕೆಲಸವನ್ನು ಮಾಡಿಸತೊಡಗಿತೆಂದರೆ ಆ ಕೆಲಸವೇ ಕವಿತೆಯೆನಿಸುವುದು. ಕಲಿತವರೆಲ್ಲರೂ ಕವಿಗಳಾದುದನ್ನು ಕಂಡವರಾರೂ ಇಲ್ಲ. ಆದರೆ ಕಲಿಯದವರು ಹಲವು ಜನರು ಹೆಸರಾದ ಕವಿಗಳಾದುದನ್ನು ಎಲ್ಲ ಕಡೆಯಲ್ಲಿಯೂ ಕಾಣಬಹುದು.

ಆನಂದದ ಕಲ್ಪನೆಯು ಕಲಿತವರಿಗೂ ಕಲಿಯದವರಿಗೂ ಸಾಮಾನ್ಯವಾಗಿರುವುದು. ಎಲ್ಲರೂ ಮನವಾರೆ ಬಯಸುವರಾ ಆನಂದವನ್ನು. ಬಾಳುವೆಯ ಗೊಂದಲದಿಂದ ಬೇಸತ್ತು ಬಳಲಿದ ಮನಸ್ಸಿಗೆ ತಣಿವನೊಂದಿಸುವುದಕ್ಕಾಗಿ ಜನರು ಅದೆಷ್ಟೋ ಬಗೆಯ ಸಾಧನಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಅಂತಹ ಸಾಧನಗಳಲ್ಲಿ ಹಾಡು ಕವಿತೆ ಕತೆಗಳು ಮೇಲಿನ ತರಗತಿಗೆ ಸೇರಿದುವುಗಳು. ಕನ್ನಡ ಭಾಷೆಯಲ್ಲಿ ತಮ್ಮ ತಮ್ಮ ಸಂಸ್ಕಾರಕ್ಕನುಗುಣವಾಗಿ ಕಲಿತವರೂ ಕಲಿಯದವರೂ ಈ ಬಗೆಯ ಹಾಡು ಕವಿತೆ ಕತೆಗಳನ್ನು ರಚಿಸುತ್ತ ಬಂದಿದ್ದಾರೆ. ಕಲಿತವರು ಅಕ್ಷರವನ್ನರಿತವರಾದುದರಿಂದ ಅವರು ರಚಿಸಿದುದೆಲ್ಲ ಬರೆಯಲ್ಪಟ್ಟು ಪುಸ್ತಕ ರೂಪವಾಗಿ ಉಳಿದುಕೊಂಡಿದೆ. ಹಳ್ಳಿಗರು ಅಕ್ಷರವನ್ನರಿಯದವರಾದುದರಿಂದ ಅವರು ರಚಿಸಿದುದೆಲ್ಲ ಜನರ ಬಾಯಲ್ಲಿ ಉಳಿದುಕೊಂಡು ಬಂದಿದೆ. ಇದರಲ್ಲಿ ಕರ್ಣ ಪರಂಪರೆಯಿಂದ ಇದುವರೆಗೆ ಉಳಿದುಕೊಂಡಿರುವುದೆಷ್ಟೋ! ಪರಂಪರೆಯು ನಷ್ಟವಾಗಿ ಅದರೊಡನೆಯೇ ಹಾಳಾಗಿಹೋದುದೆಷ್ಟೋ! ಬಲ್ಲವರಾರು? ಉಳಿದುವುಗಳನ್ನಾದರೂ ಒಂದೇ ಕಡೆಗೆ ಸೇರಿಸಿ ಕಾಯ್ದಿಡಲು ನಾವೆಲ್ಲರೂ ಹೆಣಗಬೇಕಾಗಿರುವುದೀಗ.

೨. **ಹಾಡುಗಳ ವೈವಿಧ್ಯ.**—ಹಳ್ಳಿಗರ ಹಾಡುಗಳಲ್ಲಿ ಗಂಡಸರ ಹಾಡುಗಳು ಬೇರೆ, ಹೆಂಗಸರ ಹಾಡುಗಳು ಬೇರೆ. ಗಂಡಸರು ಕೆಲಸವಿಲ್ಲದಾಗ ಲಾವಣಿ ಪದ, ಅಟ್ಟದ ಆಟ ಮೊದಲಾದುವುಗಳಿಂದ ಮನವನ್ನು ರಂಜಿಸಿಕೊಳ್ಳುವರು. ಅಲ್ಲದೆ, ಬೇಸಾಯದ ಬೇರೆ ಬೇರೆ ಕೆಲಸ ಮಾಡುವಾಗ, ಯಾತದಿಂದ ನೀರೆತ್ತುವಾಗ, ಬಂಡಿಗಳನ್ನು ನಡೆಯಿಸುವಾಗ, ಧಾನ್ಯದ ರಾಶಿಯನ್ನು ಮಾಡುವಾಗ, ತಮ್ಮ ತಮ್ಮ ಸ್ವಭಾವಕ್ಕೆ ಅನುಗುಣವಾದ ಅರ್ಥದಿಂದ ಕೂಡಿದ ಪದಗಳನ್ನು, ಒಂದೊಂದು ಸಂದರ್ಭದಲ್ಲಿ ಒಂದೊಂದು ವಿಧವಾದ ರಾಗಗಳಿಂದ ಹೇಳುವರು. ಅವರ ಆಗಿನ ಆ ರಾಗಗಳಿಗೆ ನಿಯಮವಿಲ್ಲ, ನಿರ್ಬಂಧವಿಲ್ಲ; ಶಾಸ್ತ್ರವಿಲ್ಲ, ಸಂಗೀತವಿಲ್ಲ. ಆದರೂ ಕೇಳ

ಲಿಕ್ಕೇನೋ ಒಂದು ಬಗೆಯಾಗಿದ್ದು ಬಲು ಇಂಪಾಗಿರುವುದು, ಹಿತವಾಗಿರುವುದು; ಆ ರಾಗದ ಏಕ ತಾನತೆಯಲ್ಲಿ, ಕೆಲಸದಿಂದಾಗುತ್ತಿರುವ ದೇಹಶ್ರಮವನ್ನು ಮರೆಯಿಸಿ ಬಿಡುವ ಗುಣವಿರುವುದು. ಇದರಂತೆಯೇ, ಹೆಂಗಸರು ಬೀಸುವಾಗ, ಕುಟ್ಟುವಾಗ, ನೂಲುವಾಗ, ಮಕ್ಕಳನ್ನಾಡಿಸುವಾಗ, ತೊಟ್ಟಿಲು ತೂಗುವಾಗ, ಬೇರೆ ಬೇರೆ ಮಂಗಳ ಕಾರ್ಯಗಳು ನಡೆವಾಗ, ಸಂದರ್ಭೋಚಿತ ಭಾವಗಳುಳ್ಳ ಹಾಡುಗಳನ್ನು ಹಲವು ಬಗೆಯ ಧಾಟಿಗಳಿಂದ ಹೇಳುವರು. ಶಾಸ್ತ್ರದಿಂದ ಅದೆಷ್ಟೋ ದೂರದಲ್ಲಿದ್ದ ಅವರ ಸ್ವಾಭಾವಿಕ ಸಂಗೀತವು ಕೇಳುವವರನ್ನು ತಲ್ಲೀನರನ್ನಾಗಿ ಮಾಡಿಬಿಡುತ್ತದೆ. ಹೆಂಗಸರು ಬೀಸುತಿರುವಾಗ ಹೇಳುವ ಹಾಡುಗಳ ವಿಚಾರದಲ್ಲಿಯೇ ನಾನೀಗ ಬರೆಯಬೇಕೆಂದಿರುವೆನು. ಮೊದಲು, ಆ ಹಾಡುಗಳು ಯಾವ ಜಾತಿಗೆ ಸೇರಿದುವುಗಳೆಂಬುದನ್ನು ವಿವರಿಸುವೆನು.

ತನ್ನಲ್ಲಿ ತಾನು ಕಂಡುದನ್ನು ಇತರರೂ ಕಾಣುವಂತೆ ನೋಟವನ್ನು ಕೊಡುವ, ತಾನು ಅನುಭವಿಸಿದುದನ್ನು ಉಳಿದವರೂ ಅನುಭವಿಸುವಂತೆ ಭಾವಗಳನ್ನಳ್ಳಾಡಿಸುವ ಮಾತುಗಳ ಹೆಣಿಕೆಯೇ ನಿಜವಾದ ಕವಿತೆ. ಅಂತಹ ಹೆಣಿಕೆಗಾರನೇ ಬಲ್ಲಿದನಾದ ಕಬ್ಬಿಗನು. ನಿಜವಾದ ಕವಿತೆಗೆ ವ್ಯಾಕರಣದ ಸೂತ್ರಗಳಿಂದ ಬಿಗಿದು ಬಿಗಿದು ಕಟ್ಟಿದ ಭಾಷೆಯೇ ಇರಬೇಕಾದ ಕಾರಣವಿಲ್ಲ. ನಾವು ಮಾತನಾಡುವ ನಿತ್ಯದ ವ್ಯವಹಾರದ ಭಾಷೆಯನ್ನೇ, ಅರ್ಥದ ಔಚಿತ್ಯವನ್ನರಿತು, ನಾದದ ಮಾಧುರ್ಯವನ್ನು ತಿಳಿದು, ಉಪಯೋಗಿಸಿದರೂ ಸಾಕು. ಅರ್ಥಾಲಂಕಾರದ ತೊಡಕು ಬಲೆಗಳೂ ಶಬ್ದಾಲಂಕಾರದ ಬಯಲ ಬೆಡಗೂ ಇರಲೇಬೇಕೆಂಬ ನಿಯಮವಿಲ್ಲ. ಹೇಳಬೇಕಾಗಿದ್ದ ವಿಷಯವು ಮನದಲ್ಲಿ ಮೂಡಿ, ಬುದ್ಧಿಯಲ್ಲಿ ಬಳೆದು, ಹೃದಯವನ್ನು ನಿಲುಕಿ, ತಲೆಯನ್ನು ತೂಗಿಸಿದರೆ ಕೆಲಸವಾಯಿತು. ಕೃತ್ರಿಮಗಳೆಂದು ಕಂಡುಬರುವ ಕವಿಸಮಯವೂ ಕಾವ್ಯಸಂಪ್ರದಾಯಗಳ ಬಡಿವಾರದ ಬಣ್ಣನೆಯೂ ಅಷ್ಟೊಂದು ಆವಶ್ಯಕವಾದುವಲ್ಲ; ಅಕೃತ್ರಿಮವಾದ ರೀತಿಯಿಂದ ರಸಾನುಭವವನ್ನುಂಟುಮಾಡುವ ಸ್ವಾಭಾವಿಕ ವರ್ಣನೆಯಿದ್ದರೂ ಸಾಕು. ಛಂದಶ್ಶಾಸ್ತ್ರದ ಬಂಧನಕ್ಕೆ ಸಿಲುಕಿದ ನಿಯಮಿತ ವೃತ್ತಗಳೇ ಇರಬೇಕೆಂಬುದರ ನಿರ್ಬಂಧವಿಲ್ಲ. ಭಾವಕ್ಕೆ ಅನುಗುಣವಾದ ಪದ ವಿನ್ಯಾಸವಿದ್ದು ಕಿವಿಗೆ ಸವಿಯಾಗಿರುವ ಎಂತಹ ಪದ್ಯಗಳಿಂದಲೂ ಕೆಲಸವನ್ನು ನಡೆಯಿಸಬಹುದು. ಹಳ್ಳಿಗರ ಹಾಡುಗಳೆಲ್ಲ ಈ ಜಾತಿಗೆ ಸೇರಿದುವುಗಳು. ಯಾವ ಬಗೆಯ ಕೃತ್ರಿಮತೆಯ ಸೋಂಕೂ ಇವುಗಳಿಗೆ ತಾಗಿದುದು ಕಂಡುಬರುವುದಿಲ್ಲ. ಹಳ್ಳಿಗರ ಭಾಷೆಯಲ್ಲಿಯೇ ಹೇಳಬೇಕೆಂದರೆ, ಅವರ ಹಾಡುಗಳೆಲ್ಲ "ಕರೆದ ನೊರೆಹಾಲಿ"ನಂತಹವು, *"ತುಂಬುಚ್ಚಿ ಬಿದ್ದ ಮಗೆ ಮಾವಿನ ಹಣ್ಣಿ"ನಂತಹವು; ಸಕ್ಕರೆ ಕೇಸರಿ ದ್ರಾಕ್ಷಿಗಳನ್ನು ಸೇರಿಸಿ ಕಾಯಿಸಿದ ಹಾಲಿನಂತಹವಲ್ಲ; ಕಸುಗಾಯಿಯನ್ನೇ ಕಿತ್ತು ತಂದು ಒತ್ತಿ ಒತ್ತಿ ಮಾಡಿದ ಮಾವಿನ ಹಣ್ಣಿನಂತಹವಲ್ಲ.

**೩. ಭಾಷೆಯ ಬಗೆ.**—ಈ ಹಳ್ಳಿಗರ ಹಾಡುಗಳಲ್ಲಿರುವ ಭಾಷೆಯು ಬಲು ಸೊಗಸಾಗಿದೆ; ಎಲ್ಲವೂ ಅಚ್ಚಗನ್ನಡ ಪದಗಳು; ಇನ್ನುಳಿದ ಭಾಷೆಗಳ ಸೋಂಕೇ

* ತೊಟ್ಟು ಕಳಚಿ ಬಿದ್ದ ಇಮ್ಮಾವು.

ಇಲ್ಲವೆಂದರೂ ಸಲ್ಲುವುದು; ಸಂಸ್ಕೃತ ಭಾಷೆಯನ್ನು ಮುಟ್ಟುವುದೇ ಇಲ್ಲವೆಂದು ಆಣೆ ಮಾಡಿ ಕಾವ್ಯ ರಚನೆಗಾಗಿ ಹೊರಟ ಆಂಡಯ್ಯನ ಭಾಷೆಯನ್ನೂ ಒಂದು ಗರಿ ಮೀರಿ ಮುಂದುವರಿದಿರುವುದು. ಆಂಡಯ್ಯನ ಭಾಷೆಯು ಚಿಪ್ಪಿನೊಳಗಿರುವ ಕೊಬ್ಬರಿಯಂತಹದು. ಆದರೆ ಬೀಸುವ ಹಾಡುಗಳ ಭಾಷೆಯು ಸುಲಿದ ಬಾಳೆಯ ಹಣ್ಣಿನಂತಹದು; ಕಳೆದ ಸಿಗುರಿನ ಕಬ್ಬಿನಂತಹದು. ಹೇಳಬೇಕಾದ ಶೈಲಿಯೂ ಸರಳವಾದುದು. ವಾಕ್ಯಗಳನ್ನನುಸರಿಸಿ ಉಸಿರುಗಟ್ಟಿಕೊಂಡು ಎರಡೆರಡು ಮೈಲಿ ಓಡಿ ಹೋಗಬೇಕಾದ ಸಂದರ್ಭವೇನೂ ಇಲ್ಲ. ಎಲ್ಲವೂ ಮೂರೋ ನಾಲ್ಕೋ ಪದಗಳಿಂದ ಕೂಡಿದ ಪುಟ್ಟ ಪುಟ್ಟ ವಾಕ್ಯಗಳು. ನೃಪತುಂಗನು ಹೇಳಿದಂತೆ, "ಕಿರಿದರೊಳ್ ಪಿರಿದುಮರ್ಥವನರಿಪಲ್ನೆರೆವ" ಸಾಮರ್ಥ್ಯವನ್ನು ಸಂಪಾದಿಸಿದುವುಗಳು. ಶಬ್ದಗಳು ಕುಣಿಕುಣಿಯುತ್ತಲೇ ತಮ್ಮ ತಮ್ಮ ಕಾರ್ಯವನ್ನು ಪೂರ್ತಿಗೊಳಿಸುತ್ತಿರುವುವು; ತಿಳುಹಿಸಬೇಕಾದ ಹುರುಳನ್ನೆಲ್ಲ ಮುಚ್ಚು ಮರೆಯಿಲ್ಲದೆ ನಿಚ್ಚಳವಾಗಿ ತಿಳುಹಿಸಿಬಿಡುವುದು ಈ ಹಾಡುಗಳ ಭಾಷೆಯ ಹೆಚ್ಚುಗಾರಿಕೆ. ಇಷ್ಟೆಲ್ಲವೂ ಇದ್ದು ಕಿವಿಗಳನ್ನು ಚುಚ್ಚಿ ನೋಯಿಸುವ ಕಕ್ಕಸ ನುಡಿಯೂ ಅಲ್ಲವದು; ತಾಯಿಯು ಇನಿದಾಗಿ ಹೇಳುವ ಜೋಗುಳ ಹಾಡಿನಂತೆ ಕಿವಿಗೆ ಸವಿಯಾಗಿರುವುದು. ಇಲ್ಲಿ ಬರೆದ ಹಾಡಿನ ಭಾಷೆಯನ್ನು ನೋಡಿರಿ.—

ಬಡತನವು ಬಂದಾಗ ಬಡಿಬೇಡ ಮಕ್ಕಳನು ।
ಅಡಿಯಾಡಿ ಬಂದು ತೊಡೆಮೇಲೆ ॥
ಅಡಿಯಾಡಿ ಬಂದು ತೊಡೆಮೇಲೆ ಮಲಗಿದರೆ ।
ಬಂದ ಬಡತನವು ಬಯಲಾಯ್ತೋ ॥

ಹಿರಿಯಳೊಬ್ಬಳು ಕಿರಿಯಳಾದವಳಿಗೆ ಹೇಳಿದ ಅನುಭವದ ಮಾತುಗಳು ಈ ಹಾಡಿನಲ್ಲಿ ಉಂಟು. ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೂ ಹಾಡಿನಲ್ಲಿ ಒಂದು ಸಂಸ್ಕೃತ ಪದವೂ ಸಿಕ್ಕದು; ಅದರಂತೆಯೇ ತಿಳಿದುಕೊಳ್ಳಲು ಕಷ್ಟವಾದ ಹಳಗನ್ನಡ ಪದವೊಂದೂ ದೊರೆಯದು. "ಬಂದ ಬಡತನವು ಬಯಲಾಯ್ತೋ" ಎಂಬ ಮೂರೇ ಮೂರು ಪದಗಳುಳ್ಳ ಮಾತು ಅದೆಷ್ಟು ಅರ್ಥವನ್ನು ಒಳಕೊಂಡಿರುವುದೆಂಬುದನ್ನು ನೋಡಿರಿ.

ಸರದಾರ ನನ್ನಣ್ಣ ಕರೆದು ತಾ ಹೇಳಿದನು ।
ನೆರೆಹೊರೆಯ ಮನೆಗೆ ಹೋಗಬೇಡ ॥
ನೆರೆಹೊರೆಯ ಮನೆಗೆ ಹೋಗಬೇಡ ನನ ತಂಗಿ ।
ಬರಬಾರದಾ ಮಾತು ಬರುತಾವೆ ॥

ತನ್ನ ಅಣ್ಣನು ತನಗೆ ಹೇಳಿದುದನ್ನು ಒಬ್ಬ ಹೆಣ್ಣುಮಗಳು ಇನ್ನೊಬ್ಬರಿಗಾರಿಗೋ ಹೇಳಿದಂತೆ ಈ ಹಾಡಿನಲ್ಲಿದೆ. ಇದರಲ್ಲಿರುವ "ಬರಬಾರದಾ ಮಾತು ಬರುತಾವೆ" ಎಂಬ ಮಾತು, ವಿಸ್ತೃತವಾದ ಅರ್ಥವನ್ನು ಸ್ವಲ್ಪದರಲ್ಲಿಯೇ ಅದೆಷ್ಟು ಉಚಿತ ರೀತಿಯಿಂದ ಸ್ಪಷ್ಟಗೊಳಿಸುತ್ತದೆಯೆಂಬುದನ್ನು ನೋಡಿ ಬೆರಗುವಡಬಹು

ಪಾಗಿದೆ. ಬೇರೆ ಬೇರೆ ಬಗೆಯ ವರ್ಣನೆಯನ್ನು ಮಾಡುವಾಗಲಾದರೂ ಈ ಹಾಡು ಕಾರರು ಬಳಸಿದ ಭಾಷೆಯು ಕಠಿನವಿರುವುದೇ?—

ನಡೆದರೆ ನಡು ಸಣ್ಣ ಪದುಮ ಜಾತಿಯ ಹೆಣ್ಣು ।
ಮಾವಿನಾ ಹೋಳು ನಿನ ಕಣ್ಣು ॥
ಮಾವಿನಾ ಹೋಳು ನಿನ ಕಣ್ಣು ಕಂದಮ್ಮ ।
ಮಾವ ಬಂದಿಹನು ಒಳಗ್ಹೋಗೇ ॥

ಕಟ್ಟಾಣಿ ಕಟ್ಟಿಹಳು ಕಟ್ಟೆ ಮೇಲೆ ನಿಂತಿಹಳು ।
ಬಟ್ಟಲಗಣ್ಣು ತಿರುಹುವಳು ॥
ಬಟ್ಟಲಗಣ್ಣು ತಿರುಹುವಳು ಕಂದಮ್ಮ ।
ದಿಟ್ಟಿ ಸೋಂಕ್ಯಾವು ಒಳಗ್ಹೋಗೇ ॥

ತಾಯಿಯು ಮಗಳನ್ನುದ್ದೇಶಿಸಿ ಹೇಳಿದ ಮಾತುಗಳು ಈ ಪದ್ಯಗಳಲ್ಲಿವೆ. ಇವು ಗಳಲ್ಲಿರುವ ಶಬ್ದಗಳು ಆ ಮಗಳ ಚೆಲುವಿನ ಚಿತ್ರವನ್ನು ರಮಣೀಯವಾಗಿ ತೆಗೆದಿರು ವುವು. ಸುಶಿಕ್ಷಿತ ಕವಿಗಳು ಮಾಡುವ ವರ್ಣನೆಗಿಂತ ಕಡಿಮೆಯಾಗಿರುವುದೇನಿದರಲ್ಲಿ? ಇನ್ನುಳಿದ ಕವಿಗಳಂತೆ ಇಲ್ಲಿ ಕಣ್ಣನ್ನು ಕಮಲದೊಡನೆ ಹೋಲಿಕೆಮಾಡಿಲ್ಲ, ಭೃಂಗಕ್ಕೂ ಹೋಲಿಸಿಲ್ಲ. ಇಲ್ಲಿ ಕಣ್ಣಿಗೆ ಉಪಮೆಗಳೆಂದರೆ ಮಾವಿನ ಹೋಳು; ದುಂಡಗಿರುವ ಬಟ್ಟಲು. ಇವೆಂತಹ ಉಪಮೆಗಳೆಂದು ಮೂಗು ಮುದುಡಿಸುವಂತೆ ಆಗುವುದೇನಿಲ್ಲ?

ಸೇದು ಬಾವಿಯ ಮೇಲೆ ಸೀರೆ ಸೆಳೆವವಳಾರೆ ।
ಕಾಡಿಗೇಗಣ್ಣ ನಡು ಸಣ್ಣ ॥
ಕಾಡಿಗೇಗಣ್ಣ ನಡು ಸಣ್ಣಗಿನ ತಂಗಿ ।
ರಾಯ ಕರೆಯುವನು ಮನೆಗ್ಹೋಗೆ ॥

ಹಸುರು ಕುಬುಸದ ಮೇಲೆ ಎಸಳುಗೂದಲ ಬಿಟ್ಟು ।
ಬಿಸಿಲಿಗೆ ಬೆನ್ನ ತೆರೆದಿಹಳು ॥
ಬಿಸಿಲಿಗೆ ಬೆನ್ನ ತೆರೆದಿಹಳು ನನ ತಂಗಿ ।
ಹಸುಳ ಕಂದಯ್ಯನ ಬಯಕೆಯಲಿ ॥

ಅಕ್ಕನು ತನ್ನ ಒಲವಿನ ತಂಗಿಯನ್ನು ಬಣ್ಣಿಸಿ ಹೇಳಿದ ಮಾತುಗಳಿವೆ ಈ ಪದ್ಯ ಗಳಲ್ಲಿ. ಮೊದಲನೆಯ ಪದ್ಯದಲ್ಲಿಯ "ಕಾಡಿಗೆಗಣ್ಣ ನಡು ಸಣ್ಣಗಿನ ತಂಗಿಯು" ಸೇದುವ ಬಾವಿಯ ಮೇಲೆ ನಿಂತು ಸೀರೆ ಸೆಳೆಯುವ ಚಿತ್ರವು ಮನಸ್ಸನ್ನು ಮರುಳು ಗೊಳಿಸದೆ ಬಿಡದು. ಎರಡನೆಯ ಪದ್ಯದಲ್ಲಿಯ "ಹಸುಳ ಕಂದಯ್ಯನ ಬಯಕೆಯಲಿ, ಹಸುರು ಕುಬಸದ ಮೇಲೆ ಎಸಳುಗೂದಲ ಬಿಟ್ಟು ಬಿಸಿಲಿಗೆ ಬೆನ್ನ ತೆರೆದು" ಕುಳಿತ ತಂಗಿಯ ಚಿತ್ರವು, ಕಣ್ಣಮುಂದೆ ಕಟ್ಟಿದಂತಾಗಿ ಅದಾರಿಗೆ ಭಾವೋದ್ರೇಕವನ್ನುಂಟು ಮಾಡಲಿಕ್ಕಿಲ್ಲ? ಒಳ್ಳೆಯ ಚಿತ್ರಕಾರನು ಈ ಪದ್ಯವನ್ನು ನೋಡಿದರೆ ಇದರಲ್ಲಿರುವ

ಶಾಬ್ದಿಕ ಚಿತ್ರವನ್ನು ದೃಶ್ಯ ಚಿತ್ರವನ್ನಾಗಿ ಬರೆಯದೆ ಬಿಡನು. ಬೀಸುವ ಕಲ್ಲಿನ ಹಾಡುಗಳೆಲ್ಲದರ ಭಾಷೆಯೂ ಈ ಬಗೆಯದಾಗಿದೆ; ವ್ಯಾಕರಣ ಶಾಸ್ತ್ರಿಗಳ ಒರೆಗೆ ಮಾತ್ರ ಇದು ಇಳಿಯಲಾರದು. ಆದರೇನು? ಮಾಡಬೇಕಾದ ಕೆಲಸವನ್ನು ತಲೆದೂಗಿಸುವಂತಹ ರೀತಿಯಿಂದ ಮಾಡಿ ಮುಗಿಸುವುದೀ ಹಾಡುಗಳ ಭಾಷೆಯು. ಹೆಚ್ಚಿನದನ್ನು ತೆಗೆದುಕೊಂಡು ನಾವೇನು ಮಾಡಬೇಕಾಗಿದೆ?

೪. **ಛಂದಸ್ಸು.**—ಬೀಸುವ ಹಾಡುಗಳು ಛಂದಸ್ಸಿನ ಮರ್ಯಾದೆಯನ್ನೂ ಮೀರಿ ಹೊರಟುವುಗಳಲ್ಲ; ಒಂದೊಂದು ಬಗೆಯ ನಿಯಮವನ್ನಿಟ್ಟುಕೊಂಡಿರುವುವು. ಸಾಮಾನ್ಯವಾಗಿ ಎಲ್ಲ ಹಾಡುಗಳೂ "ತ್ರಿಪದಿ" ಎಂಬ ವೃತ್ತದಲ್ಲಿರುವುದು. ತ್ರಿಪದಿಯು ಮಾತ್ರಾವೃತ್ತ, ಅಚ್ಚಗನ್ನಡ ಛಂದಸ್ಸಿಗೆ ಸೇರಿದುದು. ಭಾವಗಳನ್ನು ಉಚಿತ ರೀತಿಯಿಂದ ಸ್ಫುಟಗೊಳಿಸುವುದಕ್ಕೆ ತ್ರಿಪದಿಯನ್ನು ಬಿಟ್ಟರೆ ಬೇರೆ ವೃತ್ತವಿಲ್ಲ. ಕನ್ನಡಿಗರ ಹುಟ್ಟಿನೊಡನೆಯೇ ಬಂದ ವೃತ್ತವಿದು; ಎಲ್ಲರಿಗೂ ಅಚ್ಚುಮೆಚ್ಚಿನದು. ಆದುದರಿಂದಲೇ, ಬಗೆಗಾರರಲ್ಲಿ ಬಲ್ಲಿದನಾದ ಸರ್ವಜ್ಞಮೂರ್ತಿಯು ಎಲ್ಲವನ್ನೂ ಬದಿಗೊತ್ತಿ ತ್ರಿಪದಿಯನ್ನು ಸ್ವೀಕರಿಸಿದ್ದಾನೆ. ಹೆಂಗಸರು ತ್ರಿಪದಿಯಲ್ಲಿರುವ ಈ ಬೀಸುವ ಹಾಡುಗಳನ್ನು ಹೇಳುವಾಗ ಒಂದು ಬಗೆಯಿಂದ ಹಿಗ್ಗಿಸಿ ಹೇಳಿ ಚೌಪದಿಯನ್ನಾಗಿ ಮಾಡುವರು.—

ಸೂಳೆಯಂತಹ ಹೆಣ್ಣೆ ಸುಳಿಯಬೇಡೋಣಿಯಲಿ ।
ಸೂರ್ಯನಂತವನು ನನ ತಮ್ಮ ನೋಡಿದರೆ ।
ಸೂರೆಮಾಡುವನು ಮನೆಮಾರು ॥

ಎಂದಿರುವ ತ್ರಿಪದಿಯನ್ನೇ

ಸೂಳೆಯಂತಹ ಹೆಣ್ಣೆ ಸುಳಿಯಬೇಡೋಣಿಯಲಿ ।
ಸೂರ್ಯನಂತವನು ನನ ತಮ್ಮ ॥
ಸೂರ್ಯನಂತವನು ನನ ತಮ್ಮ ನೋಡಿದರೆ ।
ಸೂರೆ ಮಾಡುವನು ಮನೆ ಮಾರು ॥

ಎಂದು ಹಿಗ್ಗಿಸಿ ನಾಲ್ಕು ಚರಣಗಳಲ್ಲಿ ಹೇಳುವರು. ತಾಳದ ಅನುಕೂಲತೆಗಾಗಿ ತ್ರಿಪದಿಯು ಹಳ್ಳಿಗರ ಬಾಯಲ್ಲಿಯೇ ಚೌಪದಿಯಾಯಿತು. ಬಳಿಕ ಈ ಚೌಪದಿಗೆ "ಸಾಂಗತ್ಯ"ವೆಂಬ ಸ್ವತಂತ್ರ ನಾಮವನ್ನು ಕೊಟ್ಟು ಮಧ್ಯ ಕಾಲದ ಕವಿಗಳು ಸಾಹಿತ್ಯದಲ್ಲಿಯೂ ಸೇರಿಸಿಕೊಂಡುಬಿಟ್ಟಿರುವರು.

ಈ ಹಾಡುಗಳಲ್ಲಿ ಮುಖ್ಯ ಪ್ರಾಸವು ಬಹಳವಾಗೀ ಇರುವುದಾದರೂ ಇದ್ದೇ ತೀರಬೇಕೆಂಬ ನಿರ್ಬಂಧವನ್ನೇನೂ ಇಟ್ಟುಕೊಂಡಂತೆ ತೋರುವುದಿಲ್ಲ. ಮುಖ್ಯ ಪ್ರಾಸವಿಲ್ಲದ ಕಡೆಯಲ್ಲಿ ಪದ್ಯ ರಚನೆಯು ಸೌಂದರ್ಯಕ್ಕೆ ಕುಂದು ಬಂದಿರುವಂತೇನೂ ಕಾಣುವುದಿಲ್ಲ. ಇಷ್ಟೇ ಅಲ್ಲದೆ, ಪ್ರಾಸದ ನಿಯಮವನ್ನು ಇಲ್ಲಿ ಮೀರಲಾಗಿದೆಯೆಂದು ಕಲ್ಪನೆಯೂ ಬರುವಂತಿಲ್ಲ.—

ಸಣ್ಣಂಗಿ ಸರದಾರ ಬೆಳ್ಳಿಯಾ ಉಡುದಾರ ।
ಚಿನ್ನದಾ ಚೌಕ ಶಿವದಾರ ॥
ಚಿನ್ನದಾ ಚೌಕ ಶಿವದಾರದಣ್ಣಯ್ಯ ।
ಕರಣಾಟ ನಾಡ ಸಾವ್‌ಕಾರ ॥

ಈ ಹಾಡಿನ ಎಲ್ಲ ಚರಣಗಳಲ್ಲಿಯೂ ದ್ವಿತೀಯಾಕ್ಷರ ಪ್ರಾಸದ ನಿಯಮವನ್ನು ಅನುಸರಿಸಲಾಗಿದೆ; ಕೊನೆಯ ಚರಣದಲ್ಲಿ ಮಾತ್ರ ಇಲ್ಲ. ಇದರಿಂದ ಬಂಧದ ಅಂದ ವೇನಾದರೂ ಕೆಟ್ಟುಹೋಗಿದೆಯೇ?

ಅಕ್ಕತಂಗೆರು ಜೋಡು ಸೀರೆ ಕುಪ್ಪುಸ ಜೋಡು ।
ಓಲೆಗೆ ಜೋಡು *ಚೆಳತುಂಬು ॥
ಓಲೆಗೆ ಜೋಡು ಚೆಳತುಂಬು ನನ ತಂಗಿ ।
ನಾವಿಬ್ಬರು ಜೋಡು ತವರಿಗೆ ॥

ಈ ಹಾಡಿನಲ್ಲಿ ದ್ವಿತೀಯಾಕ್ಷರದ ನಿಯಮವನ್ನು ಸಂಪೂರ್ಣವಾಗಿ ಬಿಟ್ಟುಬಿಡಲಾಗಿದೆ. ಆದುದರಿಂದ ಕಿವಿಗೇನಾದರೂ ಕರ್ಕಶವಾಗಿ ಕೇಳುವುದೇನು? "ಅಯ್ಯೋ! ಪ್ರಾಸವಿಲ್ಲ" ಎಂಬ ಜುಗುಪ್ಸೆಯನ್ನೇನಾದರೂ ಹುಟ್ಟಿಸುವುದೇನು? ಯತಿ ಭಂಗವು ಮಾತ್ರ ಈ ಹಾಡುಗಳಲ್ಲಿ ಎಲ್ಲಿಯೂ ಕಾಣಬರುವುದಿಲ್ಲ; ಇದೊಂದು ಹೆಚ್ಚುಗಾರಿಕೆ ಇವುಗಳಲ್ಲಿ. ಯತಿಯ ನಿಯಮವನ್ನು ಕಾಯ್ದುಕೊಂಡುದರಿಂದಲೇ ಇವುಗಳ ಕಳೆಯು ಹೆಚ್ಚಾಗಿರುವುದು. ಯತಿಯೇ ಇವುಗಳ ಮುಖ್ಯ ಜೀವಾಳವಾಗಿರುವುದು.

**೫. ಹಾಡು ಹೇಳುವ ರೀತಿ.**—ಹೆಣ್ಣುಮಕ್ಕಳು ಈ ಬೀಸುವ ಹಾಡುಗಳನ್ನು ಹಲವು ಬಗೆಯ ಧಾಟಿಗಳಲ್ಲಿ ಹೇಳುವರು. ಒಂದೊಂದು ಧಾಟಿಗೂ ಒಂದೊಂದು ಪಲ್ಲವಿಯನ್ನು ಸೇರಿಸುವರು. ಅನೇಕ ಕಡೆಗೆ ಪಲ್ಲವಿಯೊಡನೆ ಅನುಪಲ್ಲವಿಯೂ ಇರುವುದು. ಆ ಪಲ್ಲವಿ ಅನುಪಲ್ಲವಿಗಳೂ ಒಂದೊಂದು ಸಂದರ್ಭವನ್ನು ಕುರಿತು ಆಡಿದ ಮನಸ್ಸಿನ ಮಾತುಗಳು. ಸೃಷ್ಟಿಯ ಸೊಬಗನ್ನು ಬಣ್ಣಿಸಿ ಹೇಳಿದ ಪಲ್ಲವಿ ಅನುಪಲ್ಲವಿಗಳೂ ಕೆಲವು ಉಂಟು. ಹಾಡಿನ ಎರಡೆರಡು ಚರಣಗಳನ್ನು ಹೇಳಿ, ಬಳಿಕ ಈ ಪಲ್ಲವಿಯನ್ನು ಹೇಳುವರು. ಅನುಪಲ್ಲವಿಯನ್ನು ನಡುನಡುವೆ ಯಾವಾಗಲಾದರೊಮ್ಮೆ ಹೇಳುವರು. ಪಲ್ಲವಿ ಅನುಪಲ್ಲವಿಗಳನ್ನು ಸೇರಿಸಿ ಹೇಗೆ ಹಾಡುವರೆಂಬುದಕ್ಕೆ ಮಾದರಿಯಾಗಿ ಇಲ್ಲಿ ಒಂದೆರಡು ಹಾಡುಗಳನ್ನು ಉದಾಹರಿಸುವೆನು:—

ಓಂದು ಮಕ್ಕಳ ಒಳಗೆ ಪುಂಡ ನನ್ನ ಕಂದಯ್ಯ ।
ದುಂಡುಮಲ್ಲಿಗೆಯ ಮರವೇರಿ ॥
ಈ ತೋಟದೊಳಗೆ ಹೂವಿಲ್ಲ ಕಂದಾ ಕಾಡಬೇಡೋ ॥

* ಕಿವಿಯ ಒಂದು ತೊಡವು.

ದುಂಡುಮಲ್ಲಿಗೆಯ ಮರವೇರಿ ಹೂ ಕೊಯ್ದು
ಗಂಡನುಳ್ಳ ಬಾಲೆ ತುರುಬಿಗೆ ||
ಈ ತೋಟದೊಳಗೆ ಹೂವಿಲ್ಲ ಕಂದಾ ಕಾಡಬೇಡೋ ||

ಈ ಪದ್ಯದಲ್ಲಿಯ "ಈ ತೋಟದೊಳಗೆ ಹೂವಿಲ್ಲ ಕಂದಾ ಕಾಡಬೇಡೋ" ಎಂಬುದೇ ಪಲ್ಲವಿಯು. ಎಲ್ಲ ಹಾಡುಗಳಿಗೂ ಈ ಪಲ್ಲವಿಯನ್ನು ಸೇರಿಸಲು ಬರುವುದು.

೧

ಗೋದಿಯನು ಬೀಸಲಿಕೆ ನಾದಿನಿಯು ಜಾಣಳು |
ನಾಗರ್ಹೆಡೆಯಂತೆ ನಲಿ ನಲಿದು || ಪಾರಿಜಾತದ ಹೂವು.
ನಾಗರಾ ಹೆಡೆಯಂತೆ ನಲಿ ನಲಿದು ಬೀಸುವಳು |
ಸೋದರಳಿಯನ ಮದುವೆಗೆ || ಪಾರಿಜಾತದ ಹೂವು.
ಪಾರಿಜಾತದ ಹೂವು ನಾರದನು ತಂದಿದ್ದ |
ನಾರಿ ರುಕ್ಮಿಣಿಗೆ ಮುಡಿಸಿದ || ಪಾರಿಜಾತದ ಹೂವು.

೨

ಸವತಿ ಸಣ್ಣವಳಲ್ಲ ಭಾಗಾದಿ ಬಡವಲ್ಲ |
ಕಚ್ಚುವ ಚೇಳು ಮರಿಯಲ್ಲ || ನಮ್ಮೆದುರಿಗಿನ್ಯಾಕೆ.
ಕಚ್ಚುವ ಚೇಳು ಮರಿಯಲ್ಲ ಅಣ್ಣಯ್ಯಗೆ |
ಮೆಚ್ಚಿ ಬಂದವಳು ಮಡದ್ಯಲ್ಲ || ನಮ್ಮೆದುರಿಗಿನ್ಯಾಕೆ.
ಎದುರಿಗೆ ಇನ್ಯಾಕೆ ಚದರಂಗಾಡುದು ಸಾಕೆ |
ನಾಚಿಕಿಲ್ಲೇನೆ ಈ ಮನಕೆ || ನಮ್ಮೆದುರಿಗಿನ್ಯಾಕೆ.

೩

ಕಣ್ಣು ಮೂಗಲಿ ನನ್ನ ಹೆಣ್ಣುಮಗಳು ಚೆಲುವೆ |
ಬಣ್ಣದಲಿ ನನ್ನ ಸೊಸೆ ಚೆಲುವೆ || ಯಾರೇನಂದರೆ ನಿನಗೆ?
ಬಣ್ಣದಲ್ಲೀ ನನ್ನ ಸೊಸೆ ಚೆಲುವೆ ದಸರೆಯದ |
ಬನ್ನಿಯಾ ಮುಡಿವ ಮಗ ಚೆಲುವ || ಯಾರೇನಂದರೆ ನಿನಗೆ?
ಯಾರೇನಂದರೆ ನಿನಗೆ ಮೋರೇಕೆ ಬಾಡಿದೆಯೆ? |
ನೀರು ಕಣ್ಣಲ್ಲಿ ಹರಿಯುತಿದೆ || ಯಾರೇನಂದರೆ ನಿನಗೆ?

ಈ ಹಾಡುಗಳಲ್ಲಿರುವ ಪಲ್ಲವಿ ಅನುಪಲ್ಲವಿಗಳನ್ನು, ಓದುವವರು ಗುರುತಿಸಬಹುದು. ಇದೇ ಮಾದರಿಯ ಬೇರೆ ಬೇರೆ ಧಾಟಿಗಳನ್ನುಂಟುಮಾಡುವ ಪಲ್ಲವಿ ಅನುಪಲ್ಲವಿಗಳು ಅಳತೆಯಿಲ್ಲದಷ್ಟು ಪ್ರಚಾರದಲ್ಲಿರುವುವು. ಒಮ್ಮೊಮ್ಮೆ ಈ ಪಲ್ಲವಿಗಳಿಲ್ಲದೆ ಬರಿಯ ಹಾಡುಗಳನ್ನೇ ಬೇರೆಬೇರೆ ರಾಗಗಳಲ್ಲಿ ಹೇಳುವ ವಾಡಿಕೆಯೂ ಉಂಟು.

ಬೀಸುವ ವೇಳೆಯೆಂದರೆ ಸಾಮಾನ್ಯವಾಗಿ ರಾತ್ರಿಯ ಕೊನೆಯ ಜಾವದ ಸಮಯ. ಆಗ ಎಲ್ಲೆಲ್ಲಿಯೂ ಶಾಂತತೆಯ ಸಾಮ್ರಾಜ್ಯವು ನೆಲೆಗೊಂಡಿರುವುದು; ಎಲ್ಲ ಪ್ರಾಣಿಗಳಿಗೂ ಸಕ್ಕರೆ ನಿದ್ದೆಯ ಕಾಲವದು. ಆಗಲೇ, ಹಳ್ಳಿಯ ಹೆಂಗಸರು ಎದ್ದು ಬೀಸುವುದಕ್ಕೆ ಮೊದಲುಮಾಡುವರು. ಸೃಷ್ಟಿಯು ತನ್ನ ನೈಸರ್ಗಿಕ ಸಂಗೀತಮಯ ವಾತಾವರಣದಿಂದ ಮೊದಲೇ ಕೂಡಿಕೊಂಡಿರುವುದು. ಅದರಲ್ಲಿಯೇ, ಬೀಸುವ ಕಲ್ಲು ಎಡೆಬಿಡದೆ ಮಂದ್ರ ಷಡ್ಜದಲ್ಲಿ ಸ್ವರವನ್ನು ಹಿಡಿದು ನಡೆದಿರುವುದು. "ನಾಗರ ಹೆಡೆಯಂತೆ ನಲಿ ನಲಿದು ಬೀಸುವ" ನಾರಿಯರು ಆ ಸ್ವರದಲ್ಲಿ ಸ್ವರವನ್ನು ಬೆರೆಯಿಸಿ ಕೈ ಬಳೆಗಳ "ಗಲಕು ಗಲಕು" ಎಂಬ ಸಪ್ಪಳುವೇ ತಾಳಗಳನ್ನು ಹಾಕುತ್ತಿರಲು, ವೀಣೆ ಕೊಳಲುಗಳನ್ನು ಮೂದಲಿಸುವ ಮಂಜುಲ ಕಂಠದಿಂದ ಚೆಲುವು ಒಲವುಗಳನ್ನು ಬಣ್ಣಿಸಿ ಬಣ್ಣಿಸಿ ಹಾಡುತ್ತಿರುವರು. ಅಂತಹ ಸಂಗೀತ ಸಂಯೋಗವು ಅದಾರ ಮನವನ್ನು ಸೆಳೆದುಕೊಳ್ಳದಿರುವುದು? ಅಳುತಿರುವ ಎಳೆಯ ಹಸುಳೆಗಳು ಆ ಸಂಗೀತವನ್ನು ಕೇಳಿ ಅಳುವನ್ನು ನಿಲ್ಲಿಸಿ ಸಮಾಧಾನಗೊಂಡು ನಿದ್ರೆಹೋಗುವುವು. ಅರೆ ನಿದ್ದೆಯಲ್ಲಿರುವವರು ಆ ಸಂಗೀತದಿಂದ ಸೂಸುತ್ತಿರುವ ಸಂತೋಷ ತರಂಗದಲ್ಲಿ ಓಲಾಡಿ ಓಲಾಡಿ ಮೈಮರೆಯುತ್ತಲಿರುವರು. ಮನಸ್ಸಿನ ದುಗುಡವನ್ನು ಹೊಡೆದೋಡಿಸಿ ಅದನ್ನು ಪ್ರಸನ್ನತೆಯ ಕಡೆಗೆ ತಿರುಗಿಸುವುದಾ ಮೋಹಿನೀ ಮಂತ್ರವು. ಇಂತಹ ಸಂತೋಷವನ್ನು ನಿತ್ಯ ನಿತ್ಯವೂ ಅನುಭವಿಸುತಿರುವವರೆಂತಹ ಪುಣ್ಯಶಾಲಿಗಳೋ! ಜೀವಿತ ಕಾಲದಲ್ಲಿ ಒಮ್ಮೆಯಾದರೂ ನಾವದನ್ನು ಅನುಭವಿಸಿಯೇ ತೀರಬೇಕು.

೬. ***ಹಾಡುಗಳು.**—ಬೀಸುವ ಹಾಡುಗಳನ್ನು ರಚಿಸಿದವರೆಲ್ಲ ಬಹುತರವಾಗಿ ಹೆಣ್ಣುಮಕ್ಕಳೇ ಇರಬಹುದು. ಇವುಗಳಲ್ಲಿ ಸ್ತ್ರೀಯರ ಹೃದಯದ ಚಿತ್ರಗಳನ್ನೇ ನಾವು ನೋಡುವೆವು. ಅವರ ನೈಜವಾದ ಸ್ವಭಾವವನ್ನೇ ಈ ಹಾಡುಗಳು ಸೆರೆಹಿಡಿದು ಬಿಟ್ಟಿರುವುವು. ಇವುಗಳಲ್ಲಿರುವ ವಿಷಯವೆಂದರೆ, ಬೇಕಾದ ಜನರ ಹೊಗಳಿಕೆ, ಬೇಡವಾದವರ ತೆಗಳಿಕೆ, ಸಂತಾನೇಚ್ಛೆಯ ಸಂಭ್ರಮ, ಮಕ್ಕಳಲ್ಲಿಯ ಮಮತೆ, ಚೆಲುವು ಗೆಲವುಗಳ ಬಯಕೆ, ಒಲವು ನಲಿವುಗಳ ಹಾರಯ್ಕೆ, ಅನುಕೂಲ ದಾಂಪತ್ಯದ ಆದರ್ಶ ಚಿತ್ರ, ಪ್ರತಿಕೂಲ ದಾಂಪತ್ಯದ ವಿಕೃತ ಚಿತ್ರ, ಬಾಳುವೆಯಲ್ಲಿಯ ಸುಖ ದುಃಖದ ಸಂಗತಿ, ಅವುಗಳ ಅನುಭವದಿಂದ ಕಂಡುಕೊಂಡ ನನ್ನಿಯ ರೀತಿ, ಹೆಂಗಸರು ತಿಳಿದಿರಬೇಕಾದ ಧರ್ಮ ನೀತಿ—ಇವೇ ಮೊದಲಾದುವುಗಳು. ತಮಗೆ ಬೇಕಾದವರನ್ನು ಬಗೆ ಬಗೆಯಾಗಿ ಹೊಗಳುವ ಹೆಣ್ಣುಮಕ್ಕಳ ನೈಸರ್ಗಿಕವಾದ ನಡತೆಯನ್ನು ಕೆಳಗೆ ಕೊಟ್ಟಿರುವ ಪದ್ಯಗಳಲ್ಲಿ ಸರಿಯಾಗಿ ಕಂಡುಕೊಳ್ಳಬಹುದು:—

**ತಾಯಿ**

**ಬೇಸಗೆಯ ದಿವಸಕ್ಕೆ ಬೇವಿನಾ ಮರ ತಂಪು ।**
**ಭೀಮರಥಿಯೆಂಬ ನದಿ ತಂಪು ॥**

* ಇಲ್ಲಿ ಹೇಳಿದ ಹಾಡುಗಳೆಲ್ಲ ಹೆಚ್ಚಾಗಿ ಉತ್ತರ ಕರ್ಣಾಟಕದಲ್ಲಿ ಪ್ರಚಾರದಲ್ಲಿರುವುವು.

ಭೀಮರಥಿಯೆಂಬ ನದಿ ತಂಪು ಹಡೆದಮ್ಮ ।
ನೀನಿರಲು ತಂಪು ತವರಿಗೆ || ೧ ||

ಹಲ್ಲು ಸುಲಿಯಲು ಬೇಕು ಒಳ್ಳೆ ವೀಳ್ಯವು ಬೇಕು ।
ಮಲ್ಲಿಗೆಯು ಬೇಕು ತುರುಬಿಗೆ ||
ಮಲ್ಲಿಗೆಯು ಬೇಕು ತುರುಬಿಗೇ ಹಡೆದಮ್ಮ ।
ನೀ ಬೇಕು ನನ್ನ ತವರಿಗೆ || ೨ ||

ತಾಯಿ ಮಕ್ಕಳ ನಡುವೆ ಅದೇತಕ್ಕೋ ಜಗಳ ಬಂದಿದೆ. ಕೋಪಗೊಂಡ ತಾಯಿಗೆ ದೈನ್ಯ ಭಾವದಿಂದ ಮಗಳು ಬಿನ್ನವಿಸಿಕೊಳ್ಳುವುದನ್ನು ನೋಡಿರಿ.—

ತಾಯಿ ಮಕ್ಕಳ ಜಗಳ ನ್ಯಾಯ ಮಾಡುವರಾರೆ ।
ವಾಲಿಗೆ ಮುತ್ತು *ವಜನೇನೆ ||
ವಾಲಿಗೆ ಮುತ್ತು ವಜನೇನೆ ಹಡೆದಮ್ಮ ।
ನಾ ಆಡಿದ ಮಾತು ನಿಜವೇನೆ || ೩ ||

ಈ ಪದ್ಯದಲ್ಲಿಯ "ವಾಲೆಗೆ ಮುತ್ತು ವಜನೇನೆ?" ಎಂಬ ಮಾತು ಬಲು ಮನೋಹರವಾದ ಅರ್ಥದಿಂದ ಕೂಡಿರುವುದು.

## ತಂದೆ

ಉಂಡು ಕೂತಿಹ ನನ್ನ ದುಂಡ ಮೋರೆಯ ತಂದೆ ।
ಬಿಂದುಲಿಯ ಬೇಡು ನನ ಕಂದಾ ||
ಬಿಂದುಲಿಯ ಬೇಡು ನನ ಕಂದ ನಿಮ್ಮಜ್ಜ ।
ಬಿಂದಿಗ್ಹೊನ್ನಿರುವ ದೊರೆ ಕಾಣೋ || ೧ ||

## ಮಗ

ಅಂಗ†ಕೊರೆಯಾ ಅಂಗಿ ಸಿಂಗರದ ಟೊಪ್ಪೀಗೆ ।
ಅಂಗಳದ ಒಳಗೆ ನಲಿ ನಲಿದು ||
ಅಂಗಳದಿ ಕಂದ ನಲಿದಾಡುವುದ ಕಂಡು ।
ರಂಭೆಯರು ಬಸಿರ ಬಯಸಿದರು || ೧ ||

ಚೆಲುವ ನನ್ನ ಕಂದಯ್ಯ ಹುಲಿಯ ಬೇಟೆಗೆ ಹೋದ ।
ತಲೆಬಾಗಿಲಲ್ಲಿ ಅವರಕ್ಕ ||
ತಲೆಬಾಗಿಲಲ್ಲಿ ಅವರಕ್ಕ ನಿಂತುಕೊಂಡು ।
ಚೆಲುವನಾ ದೃಷ್ಟಿ ತೆಗೆದಳು || ೨ ||

* ವಜನ=ಭಾರ. † ಒರೆಯಾ ಅಂಗಿ=ಅಳತೆಗೆ ಸರಿಯಾದ ಅಂಗಿ.

ಚಿಕ್ಕ ನನ ಕಂದಯ್ಯ ಚಿಣಿದಾಂಡು ಆಡಿದನು ।
ಚಿಕ್ಕ ಹೊಳೆ ದಾಟಿ *ತೊರಗಲ್ಲು ॥
ಚಿಕ್ಕ ಹೊಳೆ ದಾಟಿ ತೊರಗಲ್ಲ ಬಾಲೆಯರ ।
ಚಿತ್ರದಾ ಕೊಡಕೆ ಚಿಣಿ ಬಡೆದ ॥ ೩ ॥

ಹಡೆದಮ್ಮ ಹಾರುವತಿ ಒಳಗೇನ ಮಾಡುತಿ ।
ನೋಡು ಬಾ ನನ್ನ ಮಗನಾಟ ॥
ನೋಡು ಬಾ ನನ್ನ ಮಗನಾಟ ಕಂದಯ್ಯ ।
ಗುಲುಗಂಜಿ ಗುರಿಯ ಇಡುತಾನೆ ॥ ೪ ॥

## ಮಗಳು

ಅರಿಸಿಣ್ಣಚ್ಚಿದ ಮೋರೆ ಸರಪಣ್ಣಚ್ಚಿದ ಓಲೆ ।
ಅಗಸಿಯಲಿ ನನಗೆ ಎದುರಾದೆ ॥
ಅಗಸಿಯಲಿ ನನಗೆ ಎದುರಾದೆ ಕಂದಮ್ಮ ।
ಅರಸ ಬಂದಿಹನು ಒಳಗ್ಹೋಗೆ ॥ ೧ ॥

ಇಂದು ನನ್ನ ಕಂದಮ್ಮನ ಗಂಡ ಕರೆಯಲು ಬಂದ ।
ಗೊಂಡೆಯದ ಸೆರಗ ಒಲೆಯುತ ॥
ಗೊಂಡೆಯದ ಸೆರಗ ಒಲೆಯುತಲಿ ಕಂದಮ್ಮ ।
ಪಂಡಿತನ ಕೂಡ ಹೊರ ಹೊರಡೇ ॥ ೨ ॥

ಮಗಳು ಅತ್ತೆಯ ಮನೆಗೆ ಹೊರಟು ನಿಂತಿರಲು, ತಾಯಿಯು ನಾಲ್ಕು ಮಾತುಗಳನ್ನು ಹೇಳಿದಂತಿರುವುದೀ ಕೆಳಗಿನ ಹಾಡಿನಲ್ಲಿ:—

ಅತ್ತೆಯಾ ಮನೆಯೊಳಗೆ ಮುತ್ತಿನಂತಿರಬೇಕೆ ।
ಹೊತ್ತ ಹಾಕಿದರು ಉಣಬೇಕೆ ॥
ಹೊತ್ತ ಹಾಕಿದರು ಉಣಬೇಕೆ ಕಂದಮ್ಮ ।
ಹೆತ್ತ ಮನೆ ಹೆಸರು ತರಬೇಕೆ ॥ ೩ ॥

ರಮಣೀಯವಾಗಿರುವುದೀ ಪದ್ಯವು. ಶಕುಂತಲೆಯು ಅತ್ತೆಯ ಮನೆಗೆ ಹೋಗುವಾಗ ಕಣ್ವನು ಹೇಳಿದ ಮಾತುಗಳ ನೆನಪಾಗುವುದಿಲ್ಲಿ. ಮುತ್ತಿನಂತೆ ಇರಬೇಕಂತೆ! ಹೊತ್ತಿದನ್ನ ಹಾಕಿದರೂ ತಿಂದು ತಾಳಿಕೊಂಡಿರಬೇಕಂತೆ! ತನ್ನ ಸುಗುಣಗಳಿಂದ "ಹೆತ್ತಮನೆ"ಯ ಹೆಸರನ್ನು ಮುಂದಕ್ಕೆ ತರಬೇಕಂತೆ! ಭಾವ ಭಾಷೆಗಳೆರಡೂ ಎದೆಯನ್ನರಳಿಸುವುವಿಲ್ಲಿ.

* ಮಲಾಪಹಾರಿ ನದಿಯ ದಂಡೆಯಲ್ಲಿಯದೊಂದು ಊರಿದು; ಒಬ್ಬ ಸಣ್ಣ ಸಂಸ್ಥಾನಿಕನಿಗೆ ಉಂಬಳಿಯಾಗಿದೆ.

## ತಂಗಿ

ತಂಗಿಯನ್ನು ಬಣ್ಣಿಸಿದ ಎರಡು ಮೂರು ಪದ್ಯಗಳನ್ನು ಈ ಮೊದಲೇ ಬೇರೆ ಬೇರೆ ಕಡೆಯಲ್ಲಿ ಉದಾಹರಿಸಲಾಗಿದೆ. ಮುಂದೆ ಬರೆದಿರುವ ಪದ್ಯದಲ್ಲಿ, ಕೋಪಗೊಂಡ ತಂಗಿಯನ್ನು ಅಕ್ಕನು ಸಂತವಿಡುತ್ತಿರುವಂತಿದೆ.—

**ಮಾತು ಮಾತಾಡುತಲೆ ಮೋರೆ ರಂಗಿಗೆ ತಂದೆ।**
**ಬೇಡ ನನ್ನ ತಂಗಿ ಕದನವು ||**
**ಬೇಡ ನನ್ನ ತಂಗಿ ಕದನ ಕಾಳಗದಿಂದ ।**
**ಜೋಡಿನಾ ಹಕ್ಕಿ ಅಗಲುವೆವೆ** || ೧ ||

ಇಲ್ಲಿ "ಜೋಡಿನಾ ಹಕ್ಕಿ ಅಗಲುವೆವೆ" ಎಂಬ ಮಾತು ದೈನ್ಯ ಭಾವದಿಂದ ತುಂಬಿ ತುಂಬಿ ತುಳುಕುತ್ತಿರುವುದು. ಈ ಮಾತನ್ನು ಹೇಳುವಾಗ ಅಕ್ಕನ ಕಂಠವು ಬಿಗಿದು ಬಂದಿರಬಹುದು; ಕಣ್ಣಿಂದ ಒಂದೆರಡು ಹಸಿ ನೀರೂ ಉದುರಿರಬಹುದು.

ಅಣ್ಣ ತಮ್ಮರನ್ನು ಬಣ್ಣಿಸಿದ ಹಾಡುಗಳಲ್ಲೆಲ್ಲ ಸಹೋದರ ಪ್ರೀತಿಯು ಉಕ್ಕಿ ಉಕ್ಕಿ ಹೊರಸೂಸಿರುತ್ತದೆ.—

**ಹೆಣ್ಣಿನಾ ಜನ್ಮಕ್ಕೆ ಅಣ್ಣ ತಮ್ಮರಬೇಕು ।**
**ಬೆನ್ನ ಕಟ್ಟುವರು ಸಭೆಯೊಳಗೆ ||**
**ಬೆನ್ನ ಕಟ್ಟುವರು ಸಭೆಯೊಳಗೆ ಸಾವಿರ ।**
**ಹೊನ್ನ ಕಟ್ಟುವರು ಉಡಿಯೊಳಗೆ ||**

ಹೆಂಗಸರು ಮನವಾರೆ ಅಣ್ಣತಮ್ಮಂದಿರನ್ನು ಅಪೇಕ್ಷಿಸಿರುವುದನ್ನು ಹೇಳಿರುವುದೀ ಹಾಡಿನಲ್ಲಿ. ಈ ಹಾಡುಗಳಲ್ಲಿ ಬರುವ ಅಣ್ಣನು ಚೆಲುವನು, ಸಿರಿವಂತನು, ಉದಾರನು, ಗಂಭೀರನು, ತಂಗಿಯಲ್ಲಿ ವಿಶೇಷ ಮಮತೆಯುಳ್ಳವನು. ತಮ್ಮನು ಈ ಎಲ್ಲ ಗುಣಗಳಿಂದ ಕೂಡಿರುವನಲ್ಲದೆ ಅವನಲ್ಲಿ ಧೈರ್ಯ ಶೌರ್ಯ ಸಾಹಸಗಳು ಹೆಚ್ಚಾಗಿರುವುವು. ಕಿರಿಯತನದ ಮೂಲಕ ಆತನಿಗೆ ವಿವೇಕವು ಕೊಂಚ ಕಡಿಮೆ. "ಸೂಳೆಯಂತಹ ಹೆಣ್ಣನ್ನು" ಕಂಡರೆ ಮನೆಮಾರನ್ನು ಆತನು "ಸೂರೆಮಾಡುವನು" ಎಂದು ಸಂದೇಹವು ಅಕ್ಕನಿಗೆ. ಎಂತಲೇ, ಅಂತಹ ಹೆಣ್ಣಿಗೆ "ಸುಳಿಯಬೇಡ ಓಣಿಯಲಿ" ಎಂದು ಸಿಟ್ಟಿನಿಂದ ಹೇಳಿದುದೂ ಉಂಟು. (ಈ ಅರ್ಥದ ಪದ್ಯವು ಹಿಂದೆಯೇ ಬಂದಿದೆ.)

## ಅಣ್ಣ

**ನನಗೆ ಯಾರಿಲ್ಲೆಂದು ಮನದೊಳಗೆ ಮರುಗಿದೆನು ।**
**ಪರನಾಡಲೊಬ್ಬ ಪ್ರತಿ ಸೂರ್ಯ ||**
**ಪರನಾಡಲೊಬ್ಬ ಪ್ರತಿ ಸೂರ್ಯ ನನ್ನಣ್ಣ ।**
**ಬಿದಿಗೆ ಚೆಂದ್ರಾಮ ಉದಯಾದ** || ೧ ||

ಅಣ್ಣ ಬಂದನು ಎಂದು ಚಿನ್ನಿ ಸಕ್ಕರೆ ತಂದೆ ।
ಸಣ್ಣ ಸೇವಿಗೆಗೆ ಎಸರಿಟ್ಟೆ ॥
ಸಣ್ಣ ಸೇವಿಗೆಗೆ ಎಸರಿಟ್ಟೆ ಅಣ್ಣಯನ ।
ಹೊನ್ನ ಪಲ್ಲಕ್ಕಿ ತರುಬಿದೆ ॥ ೨ ॥

ದೇಸಾಯಿ ಬಾವಿಯಲಿ ಈಸು ಬಿದ್ದವನ್ಯಾರೆ ।
ರೇಸಿಮೆಯ ಬಣ್ಣ ಮೈಬಣ್ಣ ॥
ರೇಸಿಮೆಯ ಬಣ್ಣ ಮೈಬಣ್ಣದಣ್ಣಯ್ಯ ।
ದೇಸಾಯಿ ದೊರೆಯು ಹೌದೇನೇ ॥ ೩ ॥

ಹೋಗಬೇಡಣ್ಣಯ್ಯ ಹೋಳಿಗೆಯ ಮಾಡುವೆನು ।
ನಾಳೆ ನನ್ನ ಮಗಳ ಮದುವೆಯು ॥
ನಾಳೆ ನನ್ನ ಮಗಳ ಮದುವೆ ಹಂದರದೊಳಗೆ ।
ಸೋದರಾ ಮಾವನಿರಬೇಕು ॥ ೪ ॥

ಅವರಿಗೆ ಅವರಣ್ಣ ಅವಲಕ್ಕಿ ಕಳಿಸಿದನು ।
ನಮ್ಮ ಅಣ್ಣಯ್ಯ ಬಡವೇನೇ ॥
ನಮ್ಮ ಅಣ್ಣಯ್ಯ ಬಡವೇನೆ ಕೇದಗಿಯ ।
ಗರಿಯೊಳಗೆ ಘಳಿಗೆ ಕಳಿಸಿಹನೆ. ॥ ೫ ॥

ಕೇದಗೆಯ ಗರಿಯೊಳಗೆ ಸೀರೆಯ "ಘಳಿಗೆ"ಯನ್ನು ಕಳಿಸಿದನಂತೆ! ಸೀರೆಯ ಸೂಕ್ಷ್ಮತೆಯನ್ನು ಸೂಚಿಸಲು ಹೇಳಿದ ಮಾತಿನ ಸೊಗಸನ್ನು ನೋಡಿರಿ.

## ತಮ್ಮ

ಕುದುರೆಯನು ಕುಣಿಸುತ ಆನೆಯನು ನಡಿಸುತ ।
ಅರಗಿಳಿಗೆ ಮಾತ ಕಲಿಸುತ ॥
ಮರಿಗುದುರೆ ಫೇರೆ ತಿರುಹುತ ಬರುತಾನೆ ।
ಬರಿಗೊಡದಮ್ಮ ಬದಿಗಾಗೆ ॥ ೧ ॥

ಸರಕಾರವೆಂಬುವುದು *ದರಕಾರ ನಮಗಿಲ್ಲ ।
ಸರಕಾರದೊಳಗೆ ಸರಿಪಾಲು ॥
ಸರಕಾರದೊಳಗೆ ಸರಿಪಾಲು ತರುವಂಥ ।
ಸರಜ ತಮ್ಮಯ್ಯ ಮನೆಯೊಳಗೆ ॥ ೨ ॥

ಸರಿಗೆ ಕೊಂಡೆಯ ಹಾಗೆ ತಿರುಗಿ ಬಂದಿವೆ ಮೀಸೆ ।
ಕರಿದಿನಲಿ ಬಾಳ ಚೆಲುವನು ॥
ಕರಿದಿನಲಿ ಬಾಳ ಚೆಲುವ ನನ್ನ ತಮ್ಮಯಗೆ ।
ಕರಿಬೇವಿನ ದೃಷ್ಟಿ ಮುರಿದೇನು ॥ ೩ ॥

* ದರಕಾರ = ಲಕ್ಷ್ಯ.

ಇಲ್ಲಿ ಮೀಸೆಯ ವರ್ಣನೆಯು ಮನವನ್ನೆಳೆದುಕೊಳ್ಳುವಂತಹುದಾಗಿದೆ.

ಚಿಕ್ಕ ನನ್ನ ಮೈದುನ ಚಿಕ್ಕ ಹೊಳೆ ದಂಡೆಯಲಿ ।
*ಚಿಕ್ಕಾಡು ಕೊಂದು ಅಳುತಾನೆ ॥
ಚಿಕ್ಕಾಡು ಕೊಂದು ಅಳುತಾನೆ ನನ ತಮ್ಮ ।
ಹುಲಿ ಕೊಂದು ದೊರೆಯು ನಗುತಾನೆ ॥ ೪ ॥

ಇಲ್ಲಿ ಬೇಡವಾದ ಮೈದುನನನ್ನು ನಗೆಮಾತಿನಿಂದ ಬೀಳುಗಳೆದು ಬೇಕಾದ ತಮ್ಮನ ಹೆಚ್ಚಳವನ್ನು ಹಾಡಿ ಹೊಗಳಿದಂತಿದೆ. ಮಾತಿನ ರೀತಿ ಬಲು ವಿನೋದವಾಗಿದೆ.

## ದಾಂಪತ್ಯ ಪ್ರೇಮ

ಹಚ್ಚೆ ಬೊಟ್ಟಿನ ಮೇಲೆ ಹರಿದಾಡೆ ಕುಂಕುಮ ।
ಇಚ್ಛೆಯಾ ರಾಯ ಎದುರಿಗೆ ॥
ಇಚ್ಛೆಯಾ ರಾಯ ಎದುರಿಗೆ ಬಂದರೆ ।
ಹೆಚ್ಚಿನಾ ತವರ ಮರೆತೇನೆ ॥ ೧ ॥

ಕಲ್ಪನೆಯು ಹೃದಯಂಗಮವಾಗಿದೆ. ಮನೆಗೆಲಸವನ್ನು ಮಾಡಿ ಮಾಡಿ ದಣಿದು, ಮೈಯೆಲ್ಲ ಬೆವರಿ, ಹಣೆಯ ಕುಂಕುಮವು ಹಚ್ಚೆಬೊಟ್ಟಿನಮೇಲೆ ಹರಿದಾಡುತ್ತಲಿದೆ ಯೊಬ್ಬ ಗರತಿಗೆ. ಮೈ ಮನಕ್ಕೆ ತುಂಬ ಆಯಾಸವುಂಟಾಗಿದೆ. ಇಂತಹ ವೇಳೆಯಲ್ಲಿ, "ಇಚ್ಛೆಯ ರಾಯ"ನು ಎದುರಿಗೆ ಬಂದನು. ಅವನ ದರ್ಶನದಿಂದ ಹೆಣ್ಣುಮಕ್ಕಳಿಗೆ ಅತಿ ಪ್ರಿಯವಾದ ತವರ ಮನೆಯನ್ನು ಕೂಡ ಮರೆತುಬಿಡುವಷ್ಟು ಅವಳಿಗೆ ಆನಂದ ವಾಯಿತು. ಈ ಪದ್ಯದಲ್ಲಿ ಆ ಗರತಿಯು ತನ್ನ ಅನುಭವವನ್ನು ಹೇಳಿದಂತಿದೆ.—

ಹಾಸಿಗೆಯ ಹಾಸೆಂದ ಮಲ್ಲಿಗೆಯ ಮುಡಿಯೆಂದ ।
ಬೇಸತ್ತರೆ ಮಡದಿ ಮಲಗೆಂದ ॥
ಬೇಸತ್ತರೆ ಮಡದಿ ಮಲಗೆಂದ ನನ್ನ ರಾಯ ।
ನನ್ನ ನೋಡಿ ತವರ ಮರೆಯೆಂದ ॥ ೨ ॥

ಹೀಗೆ ಹೇಳುವಂತಹ ಪತಿಯೇ ಸಿಕ್ಕಬೇಕೆಂದು ಹೆಂಗಸರೆಲ್ಲರೂ ಬಯಸಿದಲ್ಲಿ ಅದರೊಳಗೆ ಅಚ್ಚರಿಪಡಬೇಕಾದುದೇನೂ ಇಲ್ಲವಲ್ಲವೆ? ಮುಂದಿನ ಪದ್ಯದ ಸೊಗಸು ನೋಡಿರಿ:—

ಮಾರಾಯ ಬೈದರೆ ಬಾರವು ಕಣ್ಣೀರು ।
ಮಾರಾಯನ ತಮ್ಮ ಮೈದುನ ॥
ಮಾರಾಯನ ತಮ್ಮ ಮೈದುನನು ಬೈದರೆ ।
ಮಾಡಿಲ್ಲದೆ ಮಳೆಯು ಸುರಿದ್ಹಾಂಗೆ ॥ ೩ ॥

ಇವು ಯಾವಳೋ ಒಬ್ಬಳು ಅನುಭವಿಸಿ ಆಡಿದ ಮಾತುಗಳು.

* ಚಿಕ್ಕಾಡು = ಚಿಗಟ.

ಇನ್ನು ಒಂದು ಸಣ್ಣ ಕತೆ: ಗಂಡ ಹೆಂಡತಿ ಇದ್ದರು. ಯಾವುದೋ ಕಾರಣದಿಂದ ಗಂಡನು ಒಂದು ದಿನ

ಮಡದಿಯನು ಬಡಿದನು ಮನದೊಳಗೆ ಮರುಗಿದನು ।
ಒಳಗ್ಹೋಗಿ ಸೆರಗ ಹಿಡಿದಾನು ॥
ಒಳಗ್ಹೋಗಿ ಸೆರಗ ಹಿಡಿದು ತಾ ಕೇಳಿದನು ।
ನಾ ಹೆಚ್ಚೊ ನಿನ್ನ ತವರ್‍ಹೆಚ್ಚೊ ॥ ೪ ॥

ಎಂಬುದಾಗಿ ಪಶ್ಚಾತ್ತಾಪದ ದನಿಯಿಂದ ಮರುಗುತ್ತಿರುವ ಮನದಿಂದ, ಚಿಕ್ಕದಾದ ಮೋರೆಯಿಂದ, ಮೈಮೇಲೆ ಕೈಯಾಡಿಸುತ್ತ ಕೇಳಿದನು. ಅದಕ್ಕೆ ಹೆಂಡತಿಯು ಹೀಗೆ ಹೇಳಿದಳು :—

ತಾಯಿದ್ದರೆ ತವರ್‍ಹೆಚ್ಚು ತಂದೆಯಿದ್ದರೆ ಬಳಗ್ಹೆಚ್ಚು ।
ಸಾವಿರಕೆ ಹೆಚ್ಚು ಪತಿ ಪುರುಷ ॥
ಸಾವಿರಕೆ ಹೆಚ್ಚು ಪತಿಯು ಬಸುರಿಲಿ ಬಂದ ।
ಮಾಣಿಕದ ಹರಳು ಮಗು ಹೆಚ್ಚು ॥ ೫ ॥

ಅಳುವುದನ್ನು ನಿಲ್ಲಿಸಿ ಅರಳಿದ ಮೋರೆಯಿಂದ ಹೆಂಡತಿಯು ಹೀಗೆ ಹೇಳಲು, ಗಂಡನು ಅದೆಷ್ಟು ಹಿರಿ ಹಿರಿ ಹಿಗ್ಗಿರಬಹುದು! ಆ ಹಿಗ್ಗಿನ ಭರದಲ್ಲಿ ಆತನು ಹೆಂಡತಿಗೊಂದು ಅಮೂಲ್ಯವಾದ ಮೆಚ್ಚನ್ನು ಕೊಟ್ಟಿದ್ದರೂ ಕೊಟ್ಟಿರಬಹುದು: ಅದು ನಮಗೆ ತಿಳಿಯದು; ಮುಗಿದುಹೋಯಿತು ಕತೆಯಿಲ್ಲಿಗೆ.

ಇನ್ನೊಂದು ಸಣ್ಣ ಕತೆ: ಅತ್ತೆಯ ಮನೆಯ ಸೊಸೆಯೊಬ್ಬಳು; ಗಂಡನೆಲ್ಲಿಯೋ ಬೇರೆಯೂರಿಗೆ ಹೋಗಿದ್ದನು. ಮನೆಯವರೆಲ್ಲರೂ ಅವಳನ್ನು ಪರಿ ಪರಿಯಿಂದ ಪೀಡಿಸಿದರು, ಬಗೆ ಬಗೆಯಾಗಿ ಬೈದರು; ಪಾಪ! ಅವಳು ಯಾರಿಗೆ ದೂರನ್ನು ಹೇಳಬೇಕು? ಮನದಲ್ಲಿಯೇ ನೊಂದಳು, ಬಗೆಯಲ್ಲಿಯೇ ಬೆಂದಳು, ಗಂಡನೆದುರಿಗೆ ಹೇಳಬೇಕೆಂದು ಹುಡುಕಾಡಿದಳು; ಎಲ್ಲಿಯೂ ಕಾಣಲಿಲ್ಲ. ಆತನ ದಾರಿಯನ್ನೇ ಕಾಯುತ್ತ ಬಾಗಿಲ ಬಳಿಯಲ್ಲಿಯೇ ನಿಂತಿರಲು, ಕುದುರೆಯ ಮೇಲೆ ಕುಳಿತುಕೊಂಡು ಗಂಡನು ಮನೆಯ ಕಡೆಗೆ ಬರುವುದನ್ನು ನೋಡಿದಳು; ಬೇಗ ಬೇಗನೆ ಬಳಿಗೆ ಹೋಗಿ ಹೀಗೆ ಹೇಳಿದಳು :—

ಎಲ್ಲಿ ಹೋಗಿದ್ದೆ ನನ್ನ ಮಲ್ಲಿಗೆಯಂತಾ ರಾಯ ।
ಎಲ್ಲಾರು ನನ್ನ ಬೈದರು ॥
ಎಲ್ಲಾರು ನನ್ನ ಬೈದಿರುವ ಬೈಗುಳನು ।
ನಿಲ್ಲಿಸಿ ಕೇಳು ನಿನ್ನ ಕುದುರೆ ॥ ೬ ॥

ಹೆಂಡತಿಯ ಮಾತನ್ನು ಕೇಳಿ, ಪಾಪ! ಅವನೂ ನೊಂದುಕೊಂಡಿರಬಹುದು ಮನೆಗೆ ಬಂದು ಯಾರಿಗೂ ಕಾಣದಂತೆ ಮರೆಯಲ್ಲಿ ಕುಳಿತು ಮುಂಗುರುಳ ನೇವರಿಸುತ್ತ

ಸವಿ ಮಾತಿನಿಂದ ಅವಳನ್ನು ಸಂತವಿಟ್ಟಿರಬಹುದು. ಬೈದವರೆಲ್ಲ ಹಿರಿಯರು; ಅವರ ನ್ನೇನು ಮಾಡುವಂತಿದೆ? ಈ ಕತೆಯೂ ಮುಗಿದುಹೋಯಿತು.

### ಅನುಕೂಲ ಸಂಬಂಧದ ಆಶೆ

ಆಕಳಿನಂಥಾ ಅತ್ತೆ ಗೋಕುಲದಂಥಾ ಮಾವ ।
ಶ್ರೀಕೃಷ್ಣನಂಥ ಪತಿರಾಜ ॥
ಶ್ರೀಕೃಷ್ಣನಂಥ ಪತಿರಾಜನಿದ್ದರೆ ।
ಸಾಕಿದಾ ತವರ ಮರೆತೇನೆ ॥ ೧ ॥

ಅಲ್ಲದಂತಹ ಅತ್ತೆ ಬೆಲ್ಲದಂತಹ ಮಾವ ।
ನೆಲ್ಲಿಕಾಯಂತ ನಗೆ ಹೆಣ್ಣೆ ॥
ನೆಲ್ಲಿಕಾಯಂತ ನಗೆ ಹೆಣ್ಣೆಯಿದ್ದರೆ ।
ಮಲ್ನಾಡ ತವರ ಮರತೇನೆ ॥ ೨ ॥

ಒಳ್ಳೆಯ ಒಗೆತನವು (ಸಂಸಾರವು) ಕೂಡಿಬಂದರೆ ಹೆಣ್ಣುಮಕ್ಕಳು ಸಾಕಿದ ತವರನ್ನು ಮರೆಯಲಿಕ್ಕೂ ಸಿದ್ಧರು. ಅದರಲ್ಲಿಯೂ, ಸರ್ವಜ್ಞಮೂರ್ತಿಯು ಹಾಡಿ ಹೊಗಳಿದ, "ಅಲ್ಲ ಅರಿಸಿನವಿರುವ, ಬೆಲ್ಲ ಬಿಳಿಯೆಲೆಯಿರುವ, ಒಳ್ಳೆ ಹಲಸಿರುವ" ಮಲೆನಾಡಿನ ತವರನ್ನೂ ಮರೆತುಬಿಡಲು ಹಿಂದೆ ಮುಂದೆ ನೋಡರು.

### ಪ್ರತಿಕೂಲ ಸಂಬಂಧ

ಅತ್ತೆಯ ಮನೆಯಲ್ಲಿಯ ಕುಂದು ಕೊರತೆಗಳನ್ನೆಲ್ಲ ಒಬ್ಬ ಹೆಣ್ಣುಮಗಳು ಬಿಸಿಯುಸಿರ ಬಿಡುತ್ತ, ಕಂಬನಿಗರೆಯುತ್ತ ತನ್ನ ತಾಯಿಯ ಬಳಿಯಲ್ಲಿ ಹೇಳುತ್ತಿರು ವಳೀ ಬಗೆಯಾಗಿ:—

ಮಾತಿಗೆ ಮಲಕಿಲ್ಲ ರೇಸಿಮೆಗೆ ತೊಡಕಿಲ್ಲ ।
ಸಾಸಿವೆಯ ಕಾಳು ಹುಳುಕಿಲ್ಲ ॥
ಸಾಸಿವೆಯ ಕಾಳು ಹುಳುಕಿಲ್ಲತ್ತೆಯ ಮುಂದೆ ।
ಸೋಸಿ ನಡೆದರೆಯು ಅರಿಕಿಲ್ಲ ॥ ೧ ॥

ಎಳ್ಳು ಬಿತ್ತಲಿಲ್ಲ ಎಳ್ಳು ಬೆಳೆಯಲಿಲ್ಲ ।
ಎಳ್ಳ ಹೂ ಸೀರೆಯುಡಲಿಲ್ಲ ॥
ಎಳ್ಳ ಹೂ ಸೀರೆಯುಡಲಿಲ್ಲ ಹಡೆದಪ್ಪ ।
ಒಳ್ಳೆ ಮನೆ ನೋಡಿ ಕೊಡಲಿಲ್ಲ ॥ ೨ ॥

*ಚಿಂತಾಕು ಇಡಲಿಲ್ಲ ಚಿಂತೆ ಬಿಟ್ಟಿರಲಿಲ್ಲ ।
ಎಂತಲ್ಲೆ ಕೊಟ್ಟೆ ಹಡೆದಮ್ಮ ॥
ಎಂತಲ್ಲೆ ಕೊಟ್ಟೆ ಹಡೆದಮ್ಮ ನಡು ಮನೆಯ ।
ಜಂತೆ ಜರಿದಂತೆ ಜರಿದೆನು ॥ ೩ ॥

* ಕತ್ತಿನ ಆಭರಣವೊಂದು.

ಅತ್ತರೆ ಅಳು ಹೀನ ನಕ್ಕರೆ ನಗೆಗೇಡು ।
*ಜಾಡಿಸಿ ನಡೆದರೆ ಜನ ಹರಲಿ ॥
ಜಾಡಿಸಿ ನಡೆದರೆ ಜನ ಹರಲಿ ಹಡೆದಮ್ಮ ।
ಹ್ಯಾಂಗೀಸಿ ಬರಲಿ ಜನದೊಳಗೆ ॥ ೪ ॥

ಮಗಳ ಮಾತುಗಳನ್ನೆಲ್ಲ ತಾಯಿ ಕೇಳಿದಳು ; ಬೆಂದು ಬೇಗುದಿಗೊಂಡಳು ; ನೊಂದು ನಿಟ್ಟುಸಿರಿಟ್ಟಳು ; ಕರುಣ ರಸದಲ್ಲಿ ಅದ್ದಿ ಅದ್ದಿ ತೆಗೆದಂತಹ ಈ ಮುಂದಿನ ಮಾತುಗಳನ್ನು ತನ್ನಲ್ಲಿ ತಾನೇ ಹೇಳಿಕೊಂಡಳು :—

ಮಲ್ಲಿಗೆಯಂಥ ಮಗಳಿಗೆ ಎಲ್ಲಿತ್ತೊ ಒಗೆತಾನ ।
ಹುಲ್ಲೊಳಗೆ ಬೆಂಕೆ ಹೊರೆದ್ಹಾಂಗೆ ॥
ಹುಲ್ಲೊಳಗೆ ಬೆಂಕೆ ಹೊರೆದ್ಹಾಂಗೆ ಗುಡ್ಡದ ।
ಕಲ್ಲಿಗೆ ಧಾರೆಯೆರೆದ್ಹಾಂಗೆ ॥

ಇಲ್ಲಿಯ ಭಾವವನ್ನು ಬಣ್ಣಿಸಿರುವ ಬಗೆಯೂ ಮಾತಿನ ಚಾತುರ್ಯವೂ ಎಂಥೆಂಥ ವರನ್ನೂ ತಲೆದೂಗಿಸಿಬಿಡುವಂತಹದಿದೆ.

## ಅತ್ತಿಗೆ

ಈ ಹಾಡುಗಳಲ್ಲಿ ಹೇಳಿರುವ ಅತ್ತಿಗೆಯು ತುಂಬ ಗಡುಸುಗಾತಿ; ತನ್ನ ನಾದಿನಿಯ ವಿಷಯದಲ್ಲಿ ಆದರವೇ ಇಲ್ಲದವಳು ; ಅಣ್ಣನನ್ನು ತನ್ನ ಕೈಗೊಂಬೆ ಯನ್ನಾಗಿ ಮಾಡಿಕೊಂಡವಳು ; ಕಪಟಿಯು, ತಂತ್ರಿಯು. ಅವಳಿಗಾಗಿ ಪ್ರೀತಿಯ ಅಣ್ಣನು ಸಹ ಒಮ್ಮೊಮ್ಮೆ ತಂಗಿಯಿಂದ ಬೈಗುಳನ್ನು ತಿನ್ನಬೇಕಾಗುತ್ತದೆ. ಅಣ್ಣನ ಮೇಲೆ ಎಷ್ಟೊಂದು ಪ್ರೀತಿಯೋ, ಅತ್ತಿಗೆಯಲ್ಲಿ ಅಷ್ಟೊಂದು ಅಪ್ರೀತಿ. ಅತ್ತಿಗೆಯ ವಿಷಯದಲ್ಲಿ ಆಡಿಕೊಂಡ ಮಾತುಗಳಿವು ನೋಡಿರಿ :—

ಅಣ್ಣನಾ ಹೆಂಡತಿಯು ಕಣ್ಣಿಗೆ ಒಳ್ಳೆವಳು ।
ಸುಣ್ಣದಾ ನೀರ ಒಲೆ ಮುಂದೆ ॥
ಸುಣ್ಣದಾ ನೀರ ಒಲೆ ಮುಂದೆ ಇಟ್ಟುಕೊಂಡು ।
ಎಮ್ಮೆ ಹಾಲೆಂದು ಬಡಿಸಿದಳು ॥ ೧ ॥

ಹಳ್ಳದಾ ದಂಡೆಯಲಿ ಹಸುರು ಮೆಣಸಿನ ಕಾಯಿ ।
ದಣಿಸ್ಯಾಡುತಾವೆ ಗಿಳಿ ಹಿಂಡು ॥
ದಣಿಸ್ಯಾಡುತಾವೆ ಗಿಳಿ ಹಿಂಡು ಅಣ್ಣಯನ ।
ಕುಣಿಸ್ಯಾಡುತಾಳೆ ಅತ್ತಿಗೆ ॥ ೨ ॥

ಹಡೆದಮ್ಮ ನಿಹಳೆಂದು ದಡ ದಡನೆ ನಾ ಬಂದೆ ।
ಒಳಗೆ ಅಣ್ಣಯ್ಯನ ಮಡದೆಮ್ಮ ॥

* ಯಾವುದನ್ನೂ ಮನಸ್ಸಿಗೆ ತಂದುಕೊಳ್ಳದೆ.

ಒಳಗೆ ಅಣ್ಣಯನ ಮಡದಿ ಸಪ್ಪುಳ ಕೇಳಿ ।
ತಲೆಬಾಗಿಲಿಂದೆ ತಿರುಗಿದೆನು || ೩ ||

ಹಡೆದಮ್ಮ ಇರುವನಕ ನಡುಮನೆ ನನದಿತ್ತು ।
ಕಡಗದ ಕೈಯ್ಯ ಸೊಸೆ ಬಂದು ||
ಕಡಗದ ಕೈಯ್ಯ ಸೊಸೆಬಂದು ನಡೆದಾಗ ।
ತುದಿಗಟ್ಟೆ ನನಗೆ ಎರವಾಯ್ತು || ೪ ||

ಯಾತಕ್ಹೋಗಲಿ ಇನ್ನು ಘಾತಕಣ್ಣನ ಮನೆಗೆ।
*ತಾಟಗಿತಿಯವನ ಮನೆಯೊಳಗೆ ||
ತಾಟಗಿತಿಯವನ ಮನೆಯೊಳಿರುವುದ ಕಂಡು ।
ತೋಟದೊಳಗುಂಡು ತಿರುಗಿದೆನು || ೫ ||

ಬೇಡವಾದ ಅತ್ತಿಗೆಯು ಗಂಡನಾದ್ದಕ್ಕೆ ಕಾರಣ, ಬೇಕಾದ ಒಲವಿನ ಅಣ್ಣಯ್ಯನೂ "ಘಾತುಕ"ನಾಗಿಬಿಟ್ಟನು ; ಸೂಳೆಯ ಪಾಪ ಸಂನ್ಯಾಸಿಗೆ ತಗುಲಿದಂತೆ.

## ಸಂತಾನದ ಬಯಕೆ

ಬೇಸೆಯನು ತಿನುವಾಗ ಬೇಡಯ್ಯ ಮಕ್ಕಳು ।
ಬಾಗಿ ಬಚ್ಚಲನು ಹೊಗುವಾಗ||
ಬಾಗಿ ಬಚ್ಚಲನು ಹೊಗುವಾಗ ಬಯಸುವರು ।
ನೂರೊಂದು ಫಲವ ಕೊಡು ಶಿವನೇ || ೧ ||

ಈ ಹಾಡು ಹೆಂಗಸರ ಸ್ವಭಾವವನ್ನು ಬಲು ಸೊಗಸಾದ ರೀತಿಯಿಂದ ಸ್ಫುಟಗೊಳಿಸುವುದು.

ಬಂಜೆ ಬಾಗಿಲ ಮುಂದೆ ಅಂಜೂರಿ ಗಿಡ ನಾಟಿ ।
ಟೊಂಗೆಗೊಂದೊಂದು ಗಿಳಿ ಕುಳಿತು ||
ಟೊಂಗೆಗೊಂದೊಂದು ಗಿಳಿ ಕುಳಿತು ಹೇಳಿದುವು ।
ಬಂಜೆ ನಿನ ಬದುಕು ಹೆರವರಿಗೆ || ೨ ||

ಮಕ್ಕಳಿಲ್ಲದ ಜನುಮ ಇಟ್ಟೇನು ತೊಟ್ಟೇನು ।
ಬಾಡಿಗೆಯ ಎತ್ತು ದುಡಿದ್ಹಾಂಗೆ||
ಬಾಡಿಗೆಯ ಎತ್ತು ದುಡಿದ್ಹಾಂಗೆ ಬಾಳೆಲೆಯ ।
ಹಾಸ್ಯುಂಡು ಬೀಸಿ ಒಗೆದ್ಹಾಂಗೆ || ೩ ||

ಈ ಎರಡು ಪದ್ಯಗಳಲ್ಲಿರುವ ಬಂಜೆಯ ಬಾಳಿನ ಬಣ್ಣನೆಯು ಎದೆಯನ್ನು ಕೊರೆಯುವಂತಹುದಾಗಿದೆ. "ಬಂಜೆ ನಿನ್ನ ಬದುಕು ಹೆರವರಿಗೆ" ಎಂಬ ಮೊದಲನೆಯ ಪದ್ಯದಲ್ಲಿರುವ ಮಾತು ನಿಜವಾಗಿಯೂ ಮಕ್ಕಳಿಲ್ಲದವರ ಎದೆಗೆ ಬರೆಯನ್ನೆಳೆಯುವಂತಹದಿದೆ. ಎರಡನೆಯ ಪದ್ಯದಲ್ಲಿ "ಬಾಡಿಗೆಯೆತ್ತಿನ ದುಡಿತ" ವನ್ನೂ, "ಹಾಸಿ

* ಚಂಡಿ.

ಉಂಡು ಬೀಸಿ ಒಗೆದ ಬಾಳೆಯ ಎಲೆ'' ಯನ್ನೂ ಬಂಜೆಯ ಬಾಳಿಗೆ ಹೋಲಿಸಿದುದರಲ್ಲಿ ಔಚಿತ್ಯವೆಷ್ಟಿರುವುದೆಂಬುದನ್ನು ನೋಡಿರಿ.

## ಲೋಕಾನುಭವ

ಮದುವೆ ಮಾಡಿಕೊಳ್ಳುವಾಗ ಹೆಣ್ಣಿನ ಬಣ್ಣಕ್ಕೆ ಮನ ಸೋಲಕೂಡದೆಂದು ಅನುಭವಸ್ಥಳಾದ ತಾಯಿಯೊಬ್ಬಳು ಮಗನಿಗೆ ಹೀಗೆ ಉಪದೇಶಿಸಿದಳು :—

ಕಪ್ಪು ಹೆಂಡತಿಯೆಂದು ಕರಕರೆಯ ಮಾಡದಿರು।
ನೇರಿಲದ ಹಣ್ಣು ಬಲು ಕಪ್ಪು ॥
ನೇರಿಲದ ಹಣ್ಣು ಬಲು ಕಪ್ಪು ನನ ಕಂದ।
ತಿಂದು ನೋಡಿದರೆ ರುಚಿ ಬಾಳ ॥ ೧ ॥

ಕೆಂಪು ಹೆಂಡತಿಯೆಂದು ಸಂತಸವ ಪಡಬೇಡ।
ಅತ್ತಿಯಾ ಹಣ್ಣು ಅತಿ ಕೆಂಪು ॥
ಅತ್ತಿಯಾ ಹಣ್ಣು ಅತಿ ಕೆಂಪು ಕಂದಯ್ಯ।
ಒಡೆದು ನೋಡಿದರೆ ಹುಳು ಬಾಳ ॥ ೨ ॥

ಒಂದನ್ನು ತಿಂದು ನೋಡಿದರೆಯೇ ರುಚಿ ತಿಳಿಯುವುದು; ಅದು ವರೆಗೂ ಅಂದಗೇಡಿ. ಇನ್ನೊಂದು, ಕೈಯಿಂದ ಮುಟ್ಟಿ ಬಿಚ್ಚಿ ನೋಡಿದರೆ ಸಾಕು; ಹುಳುಗಳ ಹುತ್ತ. ಅರ್ಥ ಗರ್ಭಿತವಾಗಿರುವುದಿಲ್ಲಿ ಆಡಿದ ಮಾತು.

ಸಾವಿರ ಕೊಟ್ಟರೂ ಸವತಿರುವ ಮನೆ ಬೇಡ।
ಸಾವಿರದ ಮೇಲೆ ಐನೂರು ॥
ಸಾವಿರದ ಮೇಲೆ ಐನೂರು ಕೊಟ್ಟರು।
ಮಲಮಕ್ಕಳಿರುವ ಮನೆ ಬೇಡ ॥ ೩ ॥

ಮಗಳಿಗೆ ಮನೆಯನ್ನು ಹುಡುಕಲು ತಂದೆಯೊಬ್ಬನು ಹೊರಟಾಗ "ಮನೆಯಲ್ಲಿ" ಕೊಟ್ಟ ಎಚ್ಚರಿಕೆಯ ಮಾತುಗಳಿವೆ ಮೇಲಿನ ಕವಿತೆಯಲ್ಲಿ.

ಊರ ಮಹಾಲಕ್ಷ್ಮಿಯ ತೇರೆಳೆಯುತಿರುವಾಗ।
ತೀರಲಿಲ್ಲ ನನ್ನ ಮನೆಗೆಲಸ ॥
ತೀರಲಿಲ್ಲ ನನ್ನ ಮನೆಗೆಲಸ ನನ್ನ ದೇವಿ।
ದೂರಿಂದೆ ಕೈಯ ಮುಗಿಯುವೆ ॥ ೪ ॥

ಮನೆವಾಳ್ತೆಯನ್ನು ಸರಿಯಾಗಿ ನಡೆಯಿಸಿಕೊಂಡುಹೋಗುವುದು ದೇವರ ಸೇವೆಗಿಂತಲೂ ಹೆಚ್ಚಿನದೆಂಬ ಭಾವವನ್ನು ಹೊರಗೆಡಹುವುದಲ್ಲವೇ ಈ ಹಾಡು?

## ಹಾರಯ್ಕೆ

ಅತ್ತಿಗೆಯು ಹಡೆಯಲಿ ಹತ್ತೆಮ್ಮೆ ಕರೆಯಲಿ।
ಹಿತ್ತಲಿನ ಬಾಳೆ ಚಿಗುರಲಿ ॥

ಹಿತ್ತಲಿನ ಬಾಳೆ ಚಿಗುರಲತ್ತಿಗೆ ಮಗಳು ।
ಅತ್ತೆ ಎಂದು ನನ್ನ ಕರೆಯಲಿ ॥ ೧ ॥

ಈ ಹಾರಯ್ಕೆಯು ಬಲು ಬುದ್ಧಿವಂತಿಕೆಯದಾಗಿ ಇದೆ. "ಅತ್ತಿಗೆಯ ಮಗಳು ಅತ್ತೆ ಎಂದು ನನ್ನ ಕರೆಯಲಿ" ಎಂದಿರುವ ಮಾತೇನೋ ಚಿಕ್ಕದು. ಆದರೆ ಅದರೊಳಗೆ ಅಡಗಿದ ಆಶೆಯು ಆನೆಯಂತಹದು.

ಹಸುಗೂಸು ಹುಟ್ಟಲಿ ಹೊಸಪೇಟೆ ಕಟ್ಟಲಿ ।
ರಸಬಾಳೆ ಕಬ್ಬು ಬೆಳೆಯಲಿ ॥
ರಸಬಾಳೆ ಕಬ್ಬು ಬೆಳೆಯಲಿ ನಮ್ಮೂರ ।
ಬಸವಣ್ಣನ ತೇರು ಎಳೆಯಲಿ ॥ ೨ ॥

ಇಲ್ಲಿ ಸಂತಾನ, ಸಂಪತ್ತು, ಸುಗ್ರಾಸ, ಸುಖಜೀವನಗಳನ್ನು ಎಷ್ಟೊಂದು ಸುಲಭವಾದ ಮಾತಿನಲ್ಲಿ ಹಾರಯಿಸಲಾಗಿದೆಯೆಂಬುದನ್ನು ನಾವಿಲ್ಲಿ ನೋಡಬಹುದು. ಎಲ್ಲರೂ ಹಾರಯಿಸುವುದು ಇದನ್ನೇ. ಆದರೆ ಎಲ್ಲರಿಗೂ ಇಂತಹ ಶಬ್ದ ಸೌಲಭ್ಯವು ಮಾತ್ರ ಸಿಕ್ಕಲಾರದು.

*ಭಾಗಾದಿ ಬಲಕಿರಲಿ ವೈರಿಯು ಎಡಕಿರಲಿ ।
†ಭಾಡಿ ನಿನ್ನ ಮನೆಯು ಎದುರಿರಲಿ ॥
ಭಾಡಿ ನಿನ್ನ ಮನೆಯು ಎದುರಿರಲಿ ಬಲ ಭೀಮ ।
ದೇವ ನನ್ನ ಮೇಲೆ ದಯವಿರಲಿ ॥ ೩ ॥

ಪರಮಾತ್ಮನ ದಯೆಯೊಂದಿದ್ದಲ್ಲಿ ಎಂತೆಂತಹ ತೊಂದರೆ ತೊಡಕುಗಳನ್ನೂ ಲೆಕ್ಕಿಸುವುದಿಲ್ಲವೆಂಬ ಅತ್ಯುಚ್ಚ ಭಾವವು ಮೇಲಿನ ಹಾಡಿನಲ್ಲಿರುವುದು.

ಅಂಗೈಲಿ ಪೂಜಿಸುವ ಲಿಂಗಯ್ಯ ಸ್ವಾಮಿಗೆ ।
ಮಂಗಳಾರತಿಯ ಬೆಳಗುವೆನು ॥
ಮಂಗಳಾರತಿಯ ಬೆಳಗಿ ನಾ ಬೇಡುವೆನು ।
ಮಹಾರಾಯನ ಮುಂದೆ ಮರಣವನು ॥ ೪ ॥

ಈ ಹಾಡಿನಲ್ಲಿಯ ಹಾರಯಿಕೆಯಂತೂ ಶಿಖರಕ್ಕೇರಿಬಿಟ್ಟಿದೆ. ಕೇಳುತ್ತಿರುವಾಗಲೇ ಹೃದಯವು ಎಂತೆಂತಹ ಭಾವಗಳನ್ನೋ ಅನುಭವಿಸುವುದು. ಮನಸ್ಸು ಒಮ್ಮೆ ಮರುಗುವುದು, ಮತ್ತೊಮ್ಮೆ ಬೆರಗಾಗುವುದು. "ಧನ್ಯ ಧನ್ಯ ಮಹಿಳಾ ಮಣಿಯರೇ!" ಎಂದು ಹೇಳಲು ನಾಲಗೆಯು ಹಾತೊರೆಯುವುದು. ಮಂಗಳಾರತಿಯನ್ನು ಬೆಳಗುತ್ತ, "ಮಹಾರಾಯನ ಮುಂದೆ ಮರಣವನ್ನು" ಬೇಡುವ ಮಹಾಸತಿಯ ಚಿತ್ರವೊಂದನ್ನು ಕಣ್ಣುಗಳು ಕಾಣುವುವು. ಆಕೆಯ ಅಡಿಗಳಿಗೆರಗುವುದಕ್ಕೆ ತಲೆಯು ತಾನಾಗಿಯೇ ಬಾಗಿಬಿಡುವುದು.

* ಭಾಗಾದಿ=ದಾಯಾದಿ. † ಭಾಡಿ=ಜಾಡಿಯ ಮಾತು ಹೇಳುವವಳು.

## ಕೊನೆಯ ಹಾಡು

ಆದ ಮುಕ್ಕಿಗೆ ನನ್ನ ಸೋದರನ ಹಾಡುವೆನು।
ಸೋದರನ ತಂಗಿ ಹಡೆದಮ್ಮ॥
ಸೋದರನ ತಂಗಿ ಹಡೆದಮ್ಮ ನಿನ್ನ ಹಾಡಿ।
ಜಾಡಿಸೀ ರಥವ ನಿಲಿಸುವೆನು॥

ಬೀಸುವ ಕಲ್ಲಿಗೆ ಪರ್ಯಾಯ ಪದವನ್ನಾಗಿ "ರಥ" ಎಂಬುದನ್ನು ಉಪಯೋಗಿಸಲಾಗಿದೆ. ಪರಮಾತ್ಮನ ರಥವನ್ನೆಳೆದ ಪುಣ್ಯಕಾರ್ಯಕ್ಕೆ ಈ ಬೀಸುವ ಕೆಲಸವು ಸಮಾಸವಾದುದೆಂಬ ಭಾವವು ಹೊರಪಡುವುದಲ್ಲವೇ ಈ ಹಾಡಿನಲ್ಲಿ?

**೭. ತುದಿಗೆ ಮೊದಲು.**—ಬೀಸುವ ಹಾಡುಗಳ ಬಗೆಗೆ ನಾನು ಹೇಳಬೇಕೆಂದಿದ್ದುದನ್ನು ಮುಗಿಸುವೆನಿಲ್ಲಿಗೆ. ಕೊನೆಯದೊಂದು ನನ್ನ ಮಾತು: ಇಂತಹ ಹಾಡುಗಳು ನಮ್ಮ ನಾಡಿನಲ್ಲಿ ಹುಡುಕಿದರೆ ರಾಶಿ ರಾಶಿಯಾಗಿ ಸಿಕ್ಕುವುವು. ಬಡವರಾದವರ ಬಾಳುವೆಯ ಗೋಳಾಟ, ಹೊಟ್ಟೆಯ ಹೋರೆಯ ಹೋರಾಟಗಳಲ್ಲಿಯೂ, ಸಿರಿವಂತರ ಸೋಮಾರಿತನ, ಅಲಸಿಕೆ, ಆಡಂಬರಗಳಲ್ಲಿಯೂ ನಮ್ಮ ಪರಂಪರೆಯ ಹುರುಳುಳ್ಳ ಭಾಗವೆಷ್ಟೋ ಹಾಳಾಗಿಹೋಗುತ್ತಲಿದೆ; ಈಗಾಗಲೇ ಅದೆಷ್ಟೋ ಹೋಗಿಯೂ ಬಿಟ್ಟಿದೆ. ಎಲ್ಲದರಂತೆ ಈ ಹಳ್ಳಿಯ ಹಾಡುಗಳ ಹಾಡೂ ಆಗಿದೆ. ಇವೆಲ್ಲವೂ ಹಾಳಾಗಿಹೋದರೆ ನಮ್ಮ ಸಾಹಿತ್ಯದಲ್ಲಿಯ ಒಂದು ಬಗೆಯ ಸೊಗಸನ್ನು ನಾವಾಗಿಯೇ ಕಳೆದುಕೊಂಡಂತಾಗುವುದಿಲ್ಲವೇ? ಹಾಗಾದರೆ, ಈಗಲೇ ಎಚ್ಚತ್ತು ಹಳ್ಳಿಯ ಹಾಡುಗಳನ್ನು ಕೂಡಿಸಿ ಕಾಯ್ದಿಡಲು ಕಲಿತ ಕನ್ನಡಿಗರೆಲ್ಲರೂ ಅನುಗೊಳಬೇಕಲ್ಲವೇ?

**ಬೆಟಗೇರಿ ಕೃಷ್ಣಶರ್ಮ.**